# ಸಚೇತನ

## ವಾರ್ಷಿಕ ವರದಿ
## 2025 - 26



Mantra
Inspire. Enable. Transform.

# ಪರಿವಿಡಿ


01 ರಾಜ್ಯ ಮಟ್ಟದ ಅಧಿಕಾರಿಗಳೊಂದಿಗೆ ಸಚೇತನ ಕಾರ್ಯಕ್ರಮದ ಪೂರ್ವಭಾವಿ ಸಭೆ

02 DSERT ಅಧಿಕಾರಿಗಳೊಂದಿಗೆ ಸಚೇತನ ಕಾರ್ಯಕ್ರಮದ ಪೂರ್ವಭಾವಿ ಸಭೆ

03 ಸಚೇತನ - ಪರಿಕಲ್ಪನೆ

04 ಉದ್ದೇಶಿತ ಫಲಿತಾಂಶ , ಕಾರ್ಯಕ್ಷೇತ್ರ

05 ಸಚೇತನ ಕಾರ್ಯಕ್ರಮದ ಬೆಂಬಲ ವ್ಯವಸ್ಥೆಯ ವಿವಿಧ ಹಂತಗಳು

06 ರಾಜ್ಯ ಮಟ್ಟದ ಶೈಕ್ಷಣಿಕ ನಾಯಕತ್ವ ಕಾರ್ಯಾಗಾರ , ಉದ್ದೇಶಿತ ಫಲಿತಾಂಶ

07 ಶೈಕ್ಷಣಿಕ ನಾಯಕತ್ವ ಕಾರ್ಯಾಗಾರ ಮುಖ್ಯಾಂಶಗಳು

08 ಜಿಲ್ಲಾ / ತಾಲ್ಲೂಕು ಹಂತದಲ್ಲಿ ಸಚೇತನ ಕುರಿತ ಸಭೆಗಳು

09 ಜಿಲ್ಲಾ ಮತ್ತು ಶಾಲಾ ಭೇಟಿ

10 ಸಿ.ಆರ್.ಪಿ ರವರಿಗೆ 2ನೇ ಹಂತದ ಸಚೇತನ ಕಾರ್ಯಾಗಾರ

11 ರಾಜ್ಯ ಸಂಪನ್ಮೂಲ ತಂಡ, ರಚನೆ ಮತ್ತು ಉದ್ದೇಶ

12 ಮಕ್ಕಳ ಶಿಕ್ಷಣಕ್ಕಾಗಿ ನಾವು ನೀವು - ಕಾರ್ಯಾಗಾರ

13 ರಾಜ್ಯ ಮಟ್ಟದ ಪ್ರಗತಿ ಹೆಜ್ಜೆ , ಪ್ರಕ್ರಿಯೆ ಮತ್ತು ಪ್ರಸ್ತುತಿ

14 ಅರೆಕಾಲಿಕ ಕಾನೂನು ಸ್ವಯಂ ಸೇವಕರ ಸಭೆ

15 ಬೆಳಗಿನ ಪ್ರಾರ್ಥನಾ ಅವಧಿ ಚಟುವಟಿಕೆ ಪರಿಣಾಮ

16 ಪೋಷಕರ ಸಬಲೀಕರಣ ಉಪಕ್ರಮ



**ಡಾ|| ವಿದ್ಯಾ ಕುಮಾರಿ, ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ ಇವರು ಸಚೇತನ ಬೆಳಗಿನ ಪ್ರಾರ್ಥನಾ ಅವಧಿಯ ಚಟುವಟಿಕೆಗಳ ಕ್ಯಾಲೆಂಡರ್ ಬಿಡುಗಡೆಗೊಳಿಸಿದರು.**
**ಈ ಕ್ಯಾಲೆಂಡರ್ ಗಳನ್ನು ಕರ್ನಾಟಕ ರಾಜ್ಯದ ಎಲ್ಲಾ ಸರ್ಕಾರಿ ಕಿರಿಯ, ಹಿರಿಯ, ಹಾಗೂ ಪ್ರೌಢ ಶಾಲೆಗಳಿಗೆ ವಿತರಿಸಲಾಗಿದೆ.**



# ಸಚೇತನ - ಪರಿಕಲ್ಪನೆ

ಸಚೇತನ ಕಾರ್ಯಕ್ರಮವು ರಾಜ್ಯದ ವಿವಿಧ ಹಂತಗಳ ಶೈಕ್ಷಣಿಕ ಅನುಷ್ಠಾನಾಧಿಕಾರಿಗಳ ಶೈಕ್ಷಣಿಕ ನಾಯಕತ್ವವನ್ನು ಬಲಗೊಳಿಸುವುದರ ಮೂಲಕ ವಿವಿಧ ಹಂತಗಳಲ್ಲಿನ ಶೈಕ್ಷಣಿಕ ಕಾರ್ಯಕ್ರಮಗಳನ್ನು ಉತ್ತಮವಾಗಿ ಅನುಷ್ಠಾನಗೊಳಿಸಲು ಪರಸ್ಪರ ಬೆಂಬಲ ವ್ಯವಸ್ಥೆಯನ್ನು ಕಲ್ಪಿಸುವುದಾಗಿದೆ.

ಪರಿಣಾಮಕಾರಿ ಕಲಿಕೆಯ ಫಲಿತಾಂಶಗಳನ್ನು ಸಾಧಿಸಲು ಮತ್ತು ಬುನಾದಿ ಸಾಕ್ಷರತೆ ಮತ್ತು ಸಂಖ್ಯಾ ಜ್ಞಾನವನ್ನು ಹೆಚ್ಚಿಸಲು, ಈ ಕೆಳಗಿನ ಕ್ಷೇತ್ರಗಳಿಗೆ ಆದ್ಯತೆ ನೀಡಲಾಗಿದೆ.

ರಾಜ್ಯಗಳು ಪರಂಪರೆಯಿಂದ ವಿವಿಧ ಉಪಕ್ರಮಗಳು ಮತ್ತು ಕಾರ್ಯಕ್ರಮಗಳ ಯೋಜನೆ ಹಾಗೂ ಅನುಷ್ಠಾನದಲ್ಲಿ ಭಾಗವಹಿಸುತ್ತಿವೆ. ಈ ಪ್ರಯತ್ನಗಳಿಗೆ DIETಗಳ ಸದಸ್ಯರು ತಮ್ಮ ವಿಷಯ ಪರಿಣಿತಿಯೊಂದಿಗೆ ಬೆಂಬಲ ನೀಡಿದ್ದಾರೆ. ಈ ಎಲ್ಲಾ ಕಾರ್ಯಕ್ರಮಗಳು ಮಕ್ಕಳ ಕಲಿಕೆಯ ಅಭಿವೃದ್ಧಿಯನ್ನು ಉದ್ದೇಶಿಸಿವೆ ಎಂಬುದನ್ನು ಗಮನಿಸುವುದು ಮಹತ್ವವಾಗಿದೆ.

ಈ ಕಾರ್ಯಕ್ರಮಗಳನ್ನು ಜಾರಿಗೆ ತರಲು ಶಿಕ್ಷಕರು, ಶಾಲಾ ನಾಯಕರು ಹಾಗೂ ಶೈಕ್ಷಣಿಕ ನಾಯಕರ ಅಗತ್ಯತೆಗಳು ಸಾಮಾಜಿಕ-ಆರ್ಥಿಕ, ಸಾಂಸ್ಕೃತಿಕ ಮತ್ತು ಜನಸಾಂಖ್ಯಿಕ ಸಂದರ್ಭಗಳ ಆಧಾರದ ಮೇಲೆ ಜಿಲ್ಲೆಯಿಂದ ಜಿಲ್ಲೆಗೆ ಬದಲಾಗಬಹುದು. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳು (DIET) ಹಾಗೂ ಜಿಲ್ಲಾ ಶಿಕ್ಷಣ ಕಚೇರಿ ಎಂಬ ಆಡಳಿತಾತ್ಮಕ ವ್ಯವಸ್ಥೆಗಳು ಯಾವುದೇ ಕಾರ್ಯಕ್ರಮಗಳ ಜಾರಿಗೆ ಜವಾಬ್ದಾರರಾಗಿರುತ್ತವೆ. ಜಿಲ್ಲೆಗಳು ತಮ್ಮದೇ ಆದ ಸಂದರ್ಭಾತ್ಮಕ ಅಗತ್ಯತೆಗಳನ್ನು ಹೊಂದಿದ್ದು, ಕೊನೆಯ ಹಂತದ ಬಳಕೆದಾರರಿಗೆ ಇನ್ನಷ್ಟು ಸಮೀಪದಲ್ಲಿರುತ್ತವೆ.



# ರಾಜ್ಯ ಮಟ್ಟದ ಅಧಿಕಾರಿಗಳೊಂದಿಗೆ ಸಚೇತನ ಪೂರ್ವಭಾವಿ ಸಭೆ



ಶ್ರೀ ಮಾರುತಿ, ನಿರ್ದೇಶಕರು (ಗುಣಮಟ್ಟ) ಸಮಗ್ರ ಶಿಕ್ಷಣ ಕರ್ನಾಟಕ ಅವರ ಸಹಕಾರದಲ್ಲಿ ಸಚೇತನ ಕಾರ್ಯಕ್ರಮವನ್ನು ಪ್ರಸ್ತಾಪಿಸಿ, ಇವರ ಮಾರ್ಗದರ್ಶನದಂತೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಯಿತು.



ಡಾ. ಸತೀಶ್ ಎಸ್ ಹೊಸಮನಿ, ನಿರ್ದೇಶಕರು (ಕಾರ್ಯಕ್ರಮ) ಇವರ ಸಹಕಾರದಲ್ಲಿ ಸಚೇತನ ಕಾರ್ಯಕ್ರಮವನ್ನು ಪ್ರಸ್ತಾಪಿಸಿ, ಅವರ ಮಾರ್ಗದರ್ಶನದಂತೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಯಿತು.



ಶ್ರೀಮತಿ ಹೇಮಾವತಿ.ವಿ, ಕಿರಿಯ ಕಾರ್ಯಕ್ರಮ ಅಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ ಸಚೇತನ ಕಾರ್ಯಕ್ರಮವನ್ನು ರಾಜ್ಯದಲ್ಲಿ 2ನೇ ವರ್ಷದ ಶೈಕ್ಷಣಿಕ ಸಾಲಿನಲ್ಲಿ ಅನುಷ್ಠಾನಗೊಳಿಸಲು, ಮಂತ್ರ ಸಂಸ್ಥೆಯ ತಂಡದ ಸದಸ್ಯರು ಸಭೆ ನಡೆಸಿ, ನಿರಂತರ ಸಲಹೆ ಮತ್ತು ಮಾರ್ಗದರ್ಶನ ಪಡೆದುಕೊಂಡು ಕಾರ್ಯಕ್ರಮದ ರೂಪುರೇಷೆಗಳನ್ನು ಸಿದ್ಧಪಡಿಸಲಾಯಿತು.



# DSERT ಅಧಿಕಾರಿಗಳೊಂದಿಗೆ ಸಚೇತನ ಕಾರ್ಯಕ್ರಮದ ಪೂರ್ವಭಾವಿ ಸಭೆ :





ಶ್ರೀ ಗೋಪಾಲಕೃಷ್ಣ ಹೆಚ್. ಎನ್. ನಿರ್ದೇಶಕರು DSERT ಇವರನ್ನು ಭೇಟಿ ಮಾಡಿ, ಸಚೇತನ ಕಾರ್ಯಕ್ರಮವನ್ನು ರಾಜ್ಯದಲ್ಲಿ 2ನೇ ವರ್ಷದ ಶೈಕ್ಷಣಿಕ ಸಾಲಿನಲ್ಲಿ ಅನುಷ್ಟಾನಗೊಳಿಸುವ ಉದ್ದೇಶದಿಂದ, ಚರ್ಚಿಸಿ ಸಚೇತನ ಕಾರ್ಯಕ್ರಮಕ್ಕೆ ಸಂಬಂಧಿಸಿದ ಸಲಹೆ ಮತ್ತು ಮಾರ್ಗದರ್ಶನವನ್ನು ಪಡೆಯಲಾಯಿತು.



ಶ್ರೀಮತಿ ನಾಗಮಣಿ, ಸಹಾಯಕ ನಿರ್ದೇಶಕರು, DSERT ಅವರನ್ನು ಭೇಟಿ ಮಾಡಿ, ಪ್ರಸ್ತುತ ಶೈಕ್ಷಣಿಕ ವರ್ಷದ ಕಾರ್ಯಕ್ರಮಗಳು ಹಾಗೂ ಯೋಜನೆಗಳ ಕುರಿತು ಚರ್ಚಿಸಿ, ಮುಂದಿನ ಕ್ರಮಗಳ ಬಗ್ಗೆ ಮಾಹಿತಿ ನೀಡಲಾಯಿತು.

# ಕಾರ್ಯಕ್ಷೇತ್ರ








**ಬೆಳಗಿನ ಪ್ರಾರ್ಥನಾ ಅವಧಿ ಚಟುವಟಿಕೆ:** ರಚನಾತ್ಮಕ ಮತ್ತು ಆಕರ್ಷಕ ಬೆಳಗಿನ ಪ್ರಾರ್ಥನಾ ಅವಧಿ ಚಟುವಟಿಕೆಗಳ ಮೂಲಕ ವಿದ್ಯಾರ್ಥಿಗಳಿಗೆ ಸಮಗ್ರ ಅಭಿವೃದ್ಧಿ ಅವಕಾಶಗಳನ್ನು ಒದಗಿಸುವುದು. ಈ ಉಪಕ್ರಮವು ವಿದ್ಯಾರ್ಥಿಗಳ ಸಂವಹನ, ಸಹಯೋಗ, ತಾರ್ಕಿಕತೆ, ನಾಯಕತ್ವ ಮತ್ತು ಗ್ರಹಿಕೆ ಕೌಶಲ್ಯಗಳನ್ನು ನಿರ್ಮಿಸುವುದರ ಮೇಲೆ ಕೇಂದ್ರೀಕರಿಸುತ್ತದೆ. ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸುವ ಮತ್ತು ಕಲಿಕೆಯ ಮಾಲೀಕತ್ವವನ್ನು ತೆಗೆದುಕೊಳ್ಳುವ ಸಕಾರಾತ್ಮಕ ಶಾಲಾ ಸಂಸ್ಕೃತಿಯನ್ನು ಸೃಷ್ಟಿಸುವ ಗುರಿಯನ್ನು ಹೊಂದಿದೆ.

**ಪೋಷಕರ ಸಬಲೀಕರಣ ಉಪಕ್ರಮ:** ಪೊಷಕರ ಭಾಗವಹಿಸುವಿಕೆಗೆ ಅರ್ಥಪೂರ್ಣ ಅವಕಾಶಗಳನ್ನು ಸೃಷ್ಟಿಸುವ ಮೂಲಕ ಮಕ್ಕಳ ಶಿಕ್ಷಣದಲ್ಲಿ ಪೋಷಕರ ತೊಡಗಿಸಿ ಕೊಳ್ಳುವಿಕೆಯನ್ನು ಬಲಪಡಿಸುವುದು. ಈ ಕಾರ್ಯಕ್ರಮವು ನಿಯಮಿತ ಪಾಲಕರ ಸಭೆ, ಮನೆ ಆಧಾರಿತ ಕಲಿಕಾ ಚಟುವಟಿಕೆಗಳು ಮತ್ತು ಪೋಷಕರೊಂದಿಗೆ ನಿರಂತರ ಸಂವಹನವನ್ನು ಪ್ರೋತ್ಸಾಹಿಸುತ್ತದೆ. ಇದು ಮನೆಯಲ್ಲಿ ಬೆಂಬಲಿತ ಕಲಿಕಾ ವಾತಾವರಣವನ್ನು ನಿರ್ಮಿಸುವ ಗುರಿಯನ್ನು ಹೊಂದಿದೆ, ವಿದ್ಯಾರ್ಥಿಗಳ ಕಲಿಕೆ ಮತ್ತು ಯೋಗಕ್ಷೇಮವನ್ನು ಹೆಚ್ಚಿಸುತ್ತದೆ.

# ಬದಲಾವಣೆಯ ಸಿದ್ಧಾಂತ




**ರಾಜ್ಯ**

- ಜಿಲ್ಲಾ ಹಂತದ ಅನುಷ್ಠಾನಾಧಿಕಾರಿಗಳಿಗೆ ಶೈಕ್ಷಣಿಕ ನಾಯಕತ್ವ ಕಾರ್ಯಾಗಾರ
- ವಿಡಿಯೋ ಕಾನ್ಫರೆನ್ಸ ಮೂಲಕ ಶಾಲಾಭಿವೃದ್ಧಿ ಉಪಕ್ರಮಗಳ ಪರಿಚಯ
- ಜಿಲ್ಲಾ ಭೇಟಿ , ಡಯಟ್ ಗಳೊಂದಿಗೆ ನಿರಂತರ ಸಂಪರ್ಕ

**ಜಿಲ್ಲೆ**

- ಬ್ಲಾಕ್ ಹಂತದ ಅನುಷ್ಠಾನಾಧಿಕಾರಿಗಳಿಗೆ ಶೈಕ್ಷಣಿಕ ನಾಯಕತ್ವ ಕಾರ್ಯಾಗಾರ
- ಶಾಲಾ ಭೇಟಿ ಮತ್ತು ಬೆಂಬಲ ವ್ಯವಸ್ಥೆ
- ಪ್ರಸಂಶೆ ಮತ್ತು ಗುರುತಿಸುವಿಕೆ

**ಬ್ಲಾಕ್**

- ಕ್ಲಸ್ಟರ್ ಹಂತದ ಅನುಷ್ಠಾನಾಧಿಕಾರಿಗಳಿಗೆ ಶೈಕ್ಷಣಿಕ ನಾಯಕತ್ವ ಕಾರ್ಯಾಗಾರ
- ಶಾಲಾ ಭೇಟಿ ಮತ್ತು ಬೆಂಬಲ ವ್ಯವಸ್ಥೆ

**ಕ್ಲಸ್ಟರ್**

- ಶಾಲಾ ಭೇಟಿ ಮತ್ತು ಬೆಂಬಲ ವ್ಯವಸ್ಥೆ
- ದತ್ತಾಂಶ ಸಂಗ್ರಹ
- ಯಶೋಗಾಥೆಗಳ ಸಂಗ್ರಹ ಮತ್ತು ಹಂಚಿಕೆ

**ಶಾಲೆ**

- ಶಾಲಾಭಿವೃದ್ಧಿ ಉಪಕ್ರಮಗಳ ಪರಿಣಾಮಕಾರಿ ಅನುಷ್ಠಾನ
- ಅನುಭವಾತ್ಮಕ ಕಲಿಕೆಗೆ ಉತ್ತೇಜನ

## ಸಚೇತನ - ನಿರಂತರ ಬೆಂಬಲ ವ್ಯವಸ್ಥೆ



# ಸಚೇತನ ಕಾರ್ಯಕ್ರಮದ ಬೆಂಬಲ ವ್ಯವಸ್ಥೆಯ ವಿವಿಧ ಹಂತಗಳು

**ರಾಜ್ಯ ಹಂತ**

ರಾಜ್ಯ ಹಂತದಲ್ಲಿ ಸಮಗ್ರ ಶಿಕ್ಷಣ ಕರ್ನಾಟಕ, ಡಿ.ಎಸ್.ಇ.ಆರ್.ಟಿ ಹಾಗೂ ಮಂತ್ರ ಫಾರ್ ಚೈಂಜ್ ಸಹಯೋಗದಲ್ಲಿ ನಿರಂತರವಾಗಿ ವಿವಿಧ ಹಂತದ ಅನುಷ್ಠಾನಾಧಿಕಾರಿಗಳಿಗೆ ಹಂತ ಹಂತವಾಗಿ ಸಚೇತನ ಕಾರ್ಯಕ್ರಮದ ಅಡಿಯಲ್ಲಿ ತರಬೇತಿ ಕಾರ್ಯಗಾರಗಳನ್ನು ಕಾಲಕಾಲಕ್ಕೆ ಹಮ್ಮಿಕೊಳ್ಳಲಾಗುತ್ತಿದೆ

**ಜಿಲ್ಲಾ ಹಂತ**

ಜಿಲ್ಲಾ ಹಂತದಲ್ಲಿ ಡಯಟ್ ಗಳ ಮೂಲಕ ಸಚೇತನ ನೋಡಲ್ ಅಧಿಕಾರಿಗಳು ನಿರಂತರವಾಗಿ ತಾಲ್ಲೂಕು ಹಂತದ ಬಿ.ಆರ್.ಸಿ ಹಾಗೂ ಬಿ.ಆರ್.ಪಿ ರವರಿಗೆ ಸಚೇತನ ಕಾರ್ಯಕ್ರಮದ ಅಡಿಯಲ್ಲಿ ತರಬೇತಿ ಕಾರ್ಯಗಾರಗಳನ್ನು ಕಾಲಕಾಲಕ್ಕೆ ಹಮ್ಮಿಕೊಳ್ಳಲಾಗುತ್ತಿದೆ.

**ಬ್ಲಾಕ್ ಹಂತ**

ಬ್ಲಾಕ್ ಹಂತದಲ್ಲಿ ಸಚೇತನ ನೋಡಲ್ ಅಧಿಕಾರಿಗಳಾದ ಕ್ಷೇತ್ರ ಸಮನ್ವಯಾಧಿಕಾರಿಗಳು ಹಾಗೂ ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳು ನಿರಂತರವಾಗಿ ಕ್ಲಸ್ಟರ್ ಹಂತದ ಅಧಿಕಾರಿಗಳಿಗೆ ಸಚೇತನ ಕಾರ್ಯಕ್ರಮದ ಅಡಿಯಲ್ಲಿರುವ ತರಬೇತಿ ಕಾರ್ಯಗಾರಗಳನ್ನು ಕಾಲಕಾಲಕ್ಕೆ ಹಮ್ಮಿಕೊಳ್ಳಲಾಗುತ್ತಿದೆ

**ಕ್ಲಸ್ಟರ್ ಹಂತ**

ಕ್ಲಸ್ಟರ್ ಹಂತದಲ್ಲಿ ಸಚೇತನ ನೋಡಲ್ ಸಮೂಹ ಸಂಪನ್ಮೂಲ ವ್ಯಕ್ತಿಗಳು ನಿರಂತರವಾಗಿ ಶಾಲಾ ಮುಖ್ಯ ಶಿಕ್ಷರುಗಳಿಗೆ ಸಚೇತನ ಕಾರ್ಯಕ್ರಮದ ಅಡಿಯಲ್ಲಿರುವ ತರಬೇತಿ ಕಾರ್ಯಗಾರಗಳನ್ನು ಕಾಲಕಾಲಕ್ಕೆ ಹಮ್ಮಿಕೊಳ್ಳಲಾಗುತ್ತಿದೆ

**ಶಾಲಾ ಹಂತ**

ಶಾಲಾ ಹಂತದಲ್ಲಿ ಮುಖ್ಯ ಶಿಕ್ಷಕರುಗಳು ನಿರಂತರವಾಗಿ ಶಾಲಾ ಶಿಕ್ಷರುಗಳಿಗೆ ಸಚೇತನ ಕಾರ್ಯಕ್ರಮದ ಅಡಿಯಲ್ಲಿರುವ ಶಾಲಾಭಿವೃದ್ಧಿ ಉಪಕ್ರಮಗಳ ಅನುಷ್ಠಾನದ ಚಟುವಟಿಕೆಗಳ ಬಗ್ಗೆ ನಿರಂತರವಾಗಿ ಮಾಹಿತಿಯನ್ನು ನೀಡುತ್ತಿರುತ್ತಾರೆ. ಶಾಲಾ ಹಂತದಲ್ಲಿ ಸಹಶಿಕ್ಷಕರು ಬೆಳಗಿನ ಪ್ರಾರ್ಥನಾ ಅವಧಿಯ ಚಟುವಟಿಕೆಗಳು ಪೋಷಕರ ಸಹಭಾಗಿತ್ವ ವಿಷಯಗಳಿಗೆ ಸಂಬಂಧಿಸಿದಂತೆ ನಿರಂತರವಾಗಿ ಮಕ್ಕಳಿಗೆ ಸಹಕಾರ ನೀಡುತ್ತಿರುವ ಸಲುವಾಗಿ, ಮಕ್ಕಳು ಸಕ್ರಿಯವಾಗಿ ಚಟುವಟಿಕೆಗಳಲ್ಲಿ ಭಾಗವಹಿಸುವ ಮೂಲಕ ವಿಭಿನ್ನ ಅನುಭವಗಳನ್ನು ಪಡೆಯುತ್ತಿದ್ದಾರೆ.




**ಸಚೇತನ ಕಾರ್ಯಕ್ರಮದ ಅಡಿಯಲ್ಲಿ ಆಯೋಜಿಸಲಾಗಿದ್ದ ರಾಜ್ಯಮಟ್ಟದ ಶೈಕ್ಷಣಿಕ ನಾಯಕತ್ವ ಕಾರ್ಯಾಗಾರದಲ್ಲಿ ರಾಜ್ಯದ ಎಲ್ಲಾ ಕ್ಷೇತ್ರ ಸಮನ್ವಯಾಧಿಕಾರಿಗಳು ಹಾಗೂ ಒಬ್ಬರು ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳು ಭಾಗವಹಿಸಿ ಕರ್ನಾಟಕ ಭೂಪಟದ ಮೇಲೆ ಸಹಿ ಹಾಕಿದರು.**



## ರಾಜ್ಯ ಮಟ್ಟದ ಶೈಕ್ಷಣಿಕ ನಾಯಕತ್ವ ಕಾರ್ಯಾಗಾರ

ಸಚೇತನ ಕಾರ್ಯಕ್ರಮವು ರಾಜ್ಯದ ವಿವಿಧ ಹಂತಗಳ ಶೈಕ್ಷಣಿಕ ಅನುಷ್ಠಾನಾಧಿಕಾರಿಗಳ ಶೈಕ್ಷಣಿಕ ನಾಯಕತ್ವವನ್ನು ಬಲಗೊಳಿಸುವುದರ ಮೂಲಕ ವಿವಿಧ ಹಂತಗಳಲ್ಲಿನ ಶೈಕ್ಷಣಿಕ ಕಾರ್ಯಕ್ರಮಗಳನ್ನು ಉತ್ತಮವಾಗಿ ಅನುಷ್ಠಾನಗೊಳಿಸಲು ಪರಸ್ಪರ ಬೆಂಬಲ ವ್ಯವಸ್ಥೆಯನ್ನು ಕಲ್ಪಿಸುವುದಾಗಿದೆ. ಪರಿಣಾಮಕಾರಿ ಕಲಿಕೆಯ ಫಲಿತಾಂಶಗಳನ್ನು ಸಾಧಿಸಲು ಮತ್ತು ಬುನಾದಿ ಸಾಕ್ಷರತೆ ಮತ್ತು ಸಂಖ್ಯಾ ಜ್ಞಾನವನ್ನು ಹೆಚ್ಚಿಸಲು, ಈ ಕೆಳಗಿನ ಕ್ಷೇತ್ರಗಳಿಗೆ ಆದ್ಯತೆ ನೀಡಲಾಗಿದೆ.

- ಶೈಕ್ಷಣಿಕ ನಾಯಕತ್ವ ಅಭಿವೃದ್ಧಿ: ಕಲಿಕಾ ಫಲಗಳು ಮತ್ತು FLN ಮೇಲೆ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ ಶಿಕ್ಷಕರಿಗೆ ಮಾರ್ಗದರ್ಶನ ನೀಡಲು ಕೋಚಿಂಗ್ ಮತ್ತು ಮೆಂಟರಿಂಗ್ ಮೂಲಕ ಬ್ಲಾಕ್ ಹಂತದ ಅಧಿಕಾರಿಗಳಿಗೆ ಸಜ್ಜುಗೊಳಿಸುವುದು.
- CRPಗಳು ಮತ್ತು BRPಗಳಿಗೆ ತರಬೇತಿ ಮತ್ತು ಮಾರ್ಗದರ್ಶನ: ಕಲಿಕಾ ಫಲಗಳಿಗೆ ಅನುಗುಣವಾಗಿ ಕೋಚಿಂಗ್ ಮತ್ತು ಮೆಂಟರಿಗ್ ತರಬೇತಿಯ ಮೂಲಕ CRP ಹಾಗು BRP ರವರಿಗೆ ಕೌಶಲ್ಯಾಭಿವೃದ್ಧಿಗೊಳಿಸುವುದು.
- ಸಮುದಾಯ ತೊಡಗಿಸಿಕೊಳ್ಳುವಿಕೆ: ಪೋಷಕರು ಮನೆಯಲ್ಲಿ ಮಕ್ಕಳಿಗೆ ಕಲಿಕಾ ವಾತಾವರಣವನ್ನು ಸೃಷ್ಟಿಸಲು ಪೋಷಕರಲ್ಲಿ ಜಾಗೃತಿ ಮೂಡಿಸುವುದು.

- ಪೋಷಕ-ಶಿಕ್ಷಕರ ಸಭೆಗಳು ಮತ್ತು ಓದುವ ಮೂಲೆಗಳನ್ನು ಬಲಪಡಿಸುವುದು: ಸಾಕ್ಷರತೆಯನ್ನು ಉತ್ತೇಜಿಸಲು ಓದುವ ಮೂಲೆಗಳನ್ನು ರಚಿಸಲು ಮಾರ್ಗದರ್ಶನ ನೀಡುವಲ್ಲಿ ಪೋಷರ ಸಭೆಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವುದು.
- ಪ್ರಾರ್ಥನಾ ಅವಧಿಯ ಚಟುವಟಿಕೆಗಳ ಕ್ಯಾಲೆಂಡರ್: ರಾಜ್ಯದ ಎಲ್ಲಾ ಶಾಲೆಗಳಲ್ಲಿ ಕ್ರಮಬದ್ಧವಾಗಿ ಪ್ರಾರ್ಥನಾ ಅವಧಿಯಲ್ಲಿ ಚಟುವಟಿಕೆಗಳನ್ನು ನಡೆಸಲು ಕ್ಯಾಲೆಂಡರ್ ರೂಪಿಸಲಾಗಿದ್ದು ಶಾಲೆಯಲ್ಲಿನ ಎಲ್ಲಾ ಮಕ್ಕಳಿಗೆ ಅವಕಾಶ ಕಲ್ಪಿಸುವ ಮೂಲಕ ಕಲಿಕೆ ಸಾಧಿಸುವುದು.

## ಉದ್ದೇಶಿತ ಫಲಿತಾಂಶ

- **ಶಿಕ್ಷಕರ ಸಾಮರ್ಥ್ಯಾಭಿವೃದ್ಧಿ:** ಕಲಿಕಾ ಫಲಗಳಿಗೆ ಅನುಗುಣವಾಗಿ ಪರಿಣಾಮಕಾರಿ ಬೋಧನಾ ಅಭ್ಯಾಸಗಳನ್ನು ಅನುಷ್ಠಾನಗೊಳಿಸುವಲ್ಲಿ ಶಿಕ್ಷಕರ ಕೌಶಲ್ಯಗಳನ್ನು ಸುಧಾರಿಸುವುದು.
- **ಪರಿಣಾಮಕಾರಿ ತರಬೇತಿ ಮತ್ತು ಮಾರ್ಗದರ್ಶನ:** ಸಿ.ಆರ್.ಪಿಗಳು, ಬಿ.ಆರ್.ಪಿಯವರು ಮತ್ತು ಜಿಲ್ಲಾ ಶೈಕ್ಷಣಿಕ ಅಧಿಕಾರಿಗಳು ಕಲಿಕಾ ಫಲಗಳ ಸಾಧನೆಯ ಕುರಿತು ಶಿಕ್ಷಕರಿಗೆ ಪರಿಣಾಮಕಾರಿಯಾಗಿ ತರಬೇತಿ ನೀಡಲು ಮತ್ತು ಮಾರ್ಗದರ್ಶನ ನೀಡಲು ಸಜ್ಜುಗೊಳಿಸುವುದು.
- **ತರಗತಿ ವೀಕ್ಷಣೆ:** BRP, CRP, ಮತ್ತು ಅಧಿಕಾರಿಗಳು ಕಲಿಕಾ ಫಲಗಳ ಪರಿಣಾಮಕಾರಿ ಬೋಧನೆಯನ್ನು ಮೇಲ್ವಿಚಾರಣೆ ಮಾಡಲು ಮತ್ತು ರಚನಾತ್ಮಕ ಪ್ರತಿಕ್ರಿಯೆಯ ವಾತಾವರಣವನ್ನು ಸ್ಥಾಪಿಸಲು ವಸ್ತುನಿಷ್ಠ-ಆಧಾರಿತ ತರಗತಿಯ ಅವಲೋಕನಗಳನ್ನು ನಡೆಸುವುದು.
- **ಹೆಚ್ಚಿದ ಪೋಷಕರ ಹಾಜರಾತಿ ಮತ್ತು ಪೋಷಕರ ಸಭೆಗಳಲ್ಲಿ ಸಕ್ರಿಯ ಭಾಗವಹಿಸುವಿಕೆ:** ತಮ್ಮ ಮಗುವಿನ ಶಿಕ್ಷಣವನ್ನು ಬೆಂಬಲಿಸುವಲ್ಲಿ ಪೋಷಕರ ಪಾತ್ರದ ತಿಳುವಳಿಕೆಯನ್ನು ಹೆಚ್ಚಿಸುವುದು.
- ಪೋಷಕ, ಶಿಕ್ಷಕ ಮತ್ತು ಶಾಲೆಗಳ ನಡುವಿನ ಸುಧಾರಿತ ಸಂವಹನ ಮತ್ತು ಸಹಯೋಗ.



## ಮುಖ್ಯಾಂಶಗಳು







4 ವಿಭಾಗಗಳು,34 ಜಿಲ್ಲೆ

100% ಭಾಗವಹಿಸುವಿಕೆ

400+ ಬ್ಲಾಕ್ ಅಧಿಕಾರಿಗಳು

### ರಾಜ್ಯದ ಎಲ್ಲಾ ಜಿಲ್ಲೆಯ ಡಯಟ್ ನ ಒಬ್ಬರು ಹಿರಿಯ ಉಪನ್ಯಾಸಕರು ಅಥವಾ ಒಬ್ಬರು ಉಪನ್ಯಾಸಕರು ಪ್ರತಿ ತಾಲ್ಲೂಕಿನ BRC - BRP ರವರಿಗೆ ನಡೆದ ಕಾರ್ಯಾಗಾರದ ವಿವರ

| ವಿಭಾಗ | ಒಟ್ಟು ಜಿಲ್ಲೆಗಳು | ದಿನಾಂಕ | ನಿರೀಕ್ಷತ ಶಿಬಿರಾರ್ಥಿಗಳು | ಹಾಜರಾದ ಶಿಬಿರಾರ್ಥಿಗಳು |
|---|---|---|---|---|
| ಮೈಸೂರು ವಿಭಾಗ | 8 | 14-07-26 ರಿಂದ 15-07-26 | 120 | 120 |
| ಬೆಳಗಾವಿ ವಿಭಾಗ | 9 | 17-07-26 ರಿಂದ 18-07-26 | 108 | 108 |
| ಕಲಬುರಗಿ ವಿಭಾಗ | 7 | 21-07-26 ರಿಂದ 22-07-26 | 68 | 68 |
| ಬೆಂಗಳೂರು ವಿಭಾಗ | 11 | 24-07-26 ರಿಂದ 25-07-26 | 118 | 118 |



# ಜಿಲ್ಲಾ / ತಾಲ್ಲೂಕು ಹಂತದಲ್ಲಿ BRC,BRP & CRP ಗಳಿಗೆ ಸಚೇತನ ಕುರಿತ ಸಭೆಗಳು

ಸಚೇತನ ಶೈಕ್ಷಣಿಕ ನಾಯಕತ್ವ ಕಾರ್ಯಕ್ರಮದ ಅಡಿಯಲ್ಲಿ ವಿಭಾಗೀಯ ಹಂತದಲ್ಲಿ ಆಯೋಜಿಸಲಾಗಿದ್ದ 2 ದಿನದ ಸನಿವಾಸ ಕಾರ್ಯಾಗಾರದಲ್ಲಿ ಭಾಗವಹಿಸಿ ಮಾರ್ಗದಶನ ಪಡೆದ ತಾಲ್ಲೂಕು ಅಧಿಕಾರಿಗಳು ತಮ್ಮ ತಾಲ್ಲೂಕು ಹಂತದಲ್ಲಿ ಸಮೂಹ ಸಂಪನ್ಮೂಲ ವ್ಯಕ್ತಿಗಳಿಗೆ ಒಂದು ದಿನದ ಕಾರ್ಯಾಗಾರವನ್ನು ಹಮ್ಮಿಕೊಂಡು ಪ್ರತಿ ಕ್ಲಸ್ಟರ್ ವಾರು ಶಾಲೆಗಳ ಸಂಖ್ಯೆಗೆ ಅನುಗುಣವಾಗಿ ಬೆಳಗ್ಗಿನ ಪ್ರಾರ್ಥನಾ ಅವಧಿಯ ಕ್ಯಾಲೆಂಡರ್, ಮಾಹಿತಿ ಕೈಪಿಡಿ, ಪೋಷಕರ ಸಬಲೀಕರಣ ಚಟುವಟಿಕೆಗಳ ಕೈಪಿಡಿಯನ್ನು ವಿತರಿಸಲಾಯಿತು.

ಒಂದು ದಿನದ ಕಾರ್ಯಾಗಾರದಲ್ಲಿ ಮಾರ್ಗದರ್ಶನ ಪಡೆದ ಸಿ.ಆರ್.ಪಿ ರವರು ತಮ್ಮ ಕ್ಲಸ್ಟರ್ ಹಂತದಲ್ಲಿ ಎಲ್ಲಾ ಶಾಲೆಯ ಮುಖ್ಯ ಶಿಕ್ಷಕರಿಗೆ ಶಾಲಾ ಅವಧಿಯ ನಂತರ ಸಭೆಯನ್ನು ಆಯೋಜಿಸಿ ಪ್ರತಿ ಶಾಲೆಗಳಿಗೂ ಬೆಳಗ್ಗಿನ ಪ್ರಾರ್ಥನಾ ಅವಧಿಯ ಕ್ಯಾಲೆಂಡರ್ ಹಾಗೂ ಕೈಪಿಡಿಗಳನ್ನು ತಲುಪಿಸಲಾಯಿತು. ಈ ಮೂಲಕ ರಾಜ್ಯದ ಪ್ರತಿ ತಾಲ್ಲೂಕು ಹಂತದಲ್ಲಿ ಸಿ.ಆರ್.ಪಿ ಗಳಿಗೆ ಹಾಗು ಸಿ.ಆರ್.ಪಿ ರವರ ಮೂಲಕ ಪ್ರತಿ ಶಾಲಾ ಮುಖ್ಯ ಶಿಕ್ಷಕರಿಗೆ ,ಸಚೇತನ ಕಾರ್ಯಕ್ರಮದ ಬಗ್ಗೆ ಅರಿವು ಮೂಡಿಸಲಾಗಿದೆ.

ಸಚೇತನ ಕಾರ್ಯಾಗಾರದ ನಂತರ ಎಲ್ಲಾ 4 ವಿಭಾಗಗಳ 35 ಜಿಲ್ಲೆಗಳಲ್ಲಿ ತರಬೇತಿಯ ನಂತರ ತಮ್ಮ ಜಿಲ್ಲೆಗಳಿಗೆ ಮರಳಿ , ಅವರ ಅನುಕೂಲಕ್ಕೆ ತಕ್ಕಂತೆ ಜಿಲ್ಲೆ ಮತ್ತು ತಾಲೂಕು ಹಂತದಲ್ಲಿ CRP ರವರಿಗೆ ಸಚೇತನ ಕಾರ್ಯಕ್ರಮಗಳ ಕುರಿತು ತರಬೇತಿಗಳನ್ನು ಆಯೋಜಿಸಿ ಅವರಿಗೆ ಸಚೇತನ ಕಾರ್ಯಕ್ರಮಗಳ ಕೈಪಿಡಿಗಳನ್ನು ಶಾಲೆಗಳಿಗೆ CRP ರವರ ಮುಖಾಂತರ ತಲುಪುವಂತೆ ಮಾಡಿದರು .

# ಜಿಲ್ಲಾ ಮತ್ತು ಶಾಲಾ ಭೇಟಿ

## ಕ್ಷೇತ್ರ ಭೇಟಿಯ ಮುಖ್ಯ ಉದ್ದೇಶ :

- ಸಚೇತನ ಕಾರ್ಯಕ್ರಮದ ಉಪಕ್ರಮಗಳ ಶಾಲಾ ಹಂತದ ಅನುಷ್ಠಾನದಂತದಲ್ಲಿ ಬರುವ ಸಾಧಕ ಬಾಧಕಗಳ ಕುರಿತು ಚರ್ಚೆ .
- ತಾಲೂಕ ಹಂತದ ಅನುಷ್ಠಾನಾಧಿಕಾರಿಗಳಿಂದ ಸಚೇತನ ಕಾರ್ಯಕ್ರಮದ ಅನುಷ್ಠಾನ ಹಂತದಲ್ಲಿ ಎದುರಾಗುವ ಸಮಸ್ಯೆಗಳ ಕುರಿತು ಚರ್ಚೆ ಮಾಡಿ ಸೂಕ್ತ ಪರಿಹಾರ ಕ್ರಮಗಳನ್ನು ಅನುಸರಿಸುವುದು.
- ಸಚೇತನ ಕಾರ್ಯಕ್ರಮದಿಂದ ಸಿದ್ದಪಡಿಸಿದ ಕೈಪಿಡಿ, ಮಾಡ್ಯೂಲ್ ಗಳನ್ನು ವಿಮರ್ಶಿಸಿ ಹಿಮ್ಮಾಯಿತಿಯನ್ನು ಪಡೆದು ಕೊಳ್ಳುವುದು .
- ಶಿಕ್ಷಕರು, ವಿದ್ಯಾರ್ಥಿಗಳು ಮತ್ತು CRP/BRPರಿಂದ ನೇರ ಪ್ರತಿಕ್ರಿಯೆಯನ್ನು ಪಡೆಯಲು ಸಹಾಯವಾಗುತ್ತದೆ.
- ಉತ್ತಮ ಅಭ್ಯಾಸಗಳನ್ನು ಮತ್ತು ಯಶೋಗಾಥೆಗಳನ್ನು ಸೃಷ್ಟಿಸುವಂತಹ ಡಯಟ್, ಬ್ಲಾಕ್, ಕ್ಲಸ್ಟರ್ ಗಳನ್ನು ಪ್ರಶಂಸಿಸಲು ಪ್ರಗತಿ ಹೆಜ್ಜೆ ಕಾರ್ಯಕ್ರಮದ ಕ್ರಿಯಾ ಯೋಜನೆ ಬಗ್ಗೆ ತಿಳಿಸುವುದು.
- ಕಾರ್ಯಕ್ರಮದ ಅನುಷ್ಠಾನದ ಗುಣಮಟ್ಟ ಹೆಚ್ಚಿಸಲು ಮತ್ತು ಜವಾಬ್ದಾರಿಯನ್ನು ಬಲಪಡಿಸಲು ಶಾಲಾ ಹಾಗೂ ಬ್ಲಾಕ್ ಭೇಟಿಗಳು ಅತ್ಯಂತ ಪರಿಣಾಮಕಾರಿ ಸಾಧನಗಳಾಗಿವೆ.



## ಜಿಲ್ಲಾ ಮತ್ತು ಶಾಲಾ ಭೇಟಿಯ ಮಾಹಿತಿ

- ಜಿಲ್ಲಾ ಭೇಟಿ /ಪ್ರಾಂಶುಪಾಲರೊಂದಿಗೆ ಸಭೆ : 34
- ವಲಯ ಭೇಟಿ ,BRC/BRP ರವರೊಂದಿಗೆ ಸಭೆ : 60
- ಕ್ಲಸ್ಟರ್ ಭೇಟಿ ,CRP ರವರೊಂದಿಗೆ ಸಭೆ :76
- ಶಾಲಾ ಭೇಟಿ ಮತ್ತು ಮುಖ್ಯ ಶಿಕ್ಷಕರೊಡನೆ ಸಭೆ :504
- ಶಾಲೆ ಭೇಟಿ ಮತ್ತು ಪ್ರಾರ್ಥನಾ ಅವಧಿ ವೀಕ್ಷಣೆ : 288
- Reading corner : 446





# ಜಿಲ್ಲಾ / ತಾಲ್ಲೂಕುಗಳಲ್ಲಿ ಸಿ.ಆರ್.ಪಿ ರವರಿಗೆ 2ನೇ ಹಂತದ ಸಚೇತನ ಕಾರ್ಯಾಗಾರ



2025-26ನೇ ಶೈಕ್ಷಣಿಕ ಸಾಲಿನಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಹೊಸದಾಗಿ ಸಿ.ಆರ್.ಪಿ ವೃತ್ತಿಯನ್ನು ಪ್ರಾರಂಭಿಸಿದ ಅನುಷ್ಠಾನ ಅಧಿಕಾರಿಗಳಿಗೆ ಮತ್ತು ಕಳೆದ ಶೈಕ್ಷಣಿಕ ಸಾಲಿನಿಂದ ಸಿ.ಆರ್.ಪಿ ಯಾಗಿ ಕಾರ್ಯನಿರ್ವಹಿಸುತ್ತಿರುವ ಅನುಷ್ಠಾನಾಧಿಕಾರಿಗಳಿಗೆ ಸಚೇತನ ಕಾರ್ಯಕ್ರಮದ ಕುರಿತು ಪರಿಚಯ & ಪ್ರಸ್ತುತ ಸಿ.ಆರ್.ಪಿ ರವರ ಕ್ಲಸ್ಟರ್ ವ್ಯಾಪ್ತಿಯಲ್ಲಿ ಅನುಷ್ಠಾನಗೊಂಡಿರುವ ಸಚೇತನ ಕಾರ್ಯಕ್ರಮದ ಕುರಿತ ಸಭೆಯಾಗಿದ್ದು, ಮುಖ್ಯವಾಗಿ ಜಿಲ್ಲೆಯ ಪ್ರಗತಿ ಮತ್ತು ಸವಾಲುಗಳು, ಶಾಲೆಗಳಿಗೆ ಸಿ.ಆರ್.ಪಿ ರವರ ಬೆಂಬಲ, ಶಾಲಾ ವೀಕ್ಷಣೆ ಮುಖ್ಯ ಅಂಶಗಳಾಗಿದ್ದವು.

ಜಿಲ್ಲಾ ಹಂತದಲ್ಲಿ ಡಯಟ್ ನ ಪ್ರಾಂಶುಪಾಲರು ಮತ್ತು ನೋಡಲ್ ಅಧಿಕಾರಿಗಳು ಸಚೇತನ ಕಾರ್ಯಕ್ರಮದ ಅನುಷ್ಠಾನದ ಪರಿಣಾಮವನ್ನು ಅರಿಯಲು ಮಾಡಿಕೊಂಡಿರುವ ಟೂಲ್ ಮತ್ತು ಡ್ಯಾಶ್ ಬೋರ್ಡ್‌ಗೆ ಸಂಬಂಧಿಸಿದ ವಿಚಾರಗಳ ಕುರಿತ ಮಾಹಿತಿ ವಿನಿಮಯ ಮತ್ತು ಪ್ರಗತಿ ಹೆಜ್ಜೆ ಕುರಿತಂತೆ ಕಿರು ನೋಟದ ಪರಿಚಯವನ್ನು ಮಾಡಲು ಈ ಒಂದು ಸಿ.ಆರ್.ಪಿ ಕಾರ್ಯಾಗಾರವನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕಾರ್ಯಾಗಾರವನ್ನು ಯೋಜಿಸಲಾಯಿತು.

# ಜಿಲ್ಲಾ / ತಾಲ್ಲೂಕುಗಳಲ್ಲಿ ಸಿ.ಆರ್.ಪಿ ರವರಿಗೆ ನೆಡೆದ
# 2ನೇ ಹಂತದ ಸಚೇತನ ಕಾರ್ಯಾಗಾರದ ಫೋಟೋಗಳು


















## ಹಿನ್ನಲೆ

ರಾಜ್ಯ ಸಂಪನ್ಮೂಲ ತಂಡದ ಸದಸ್ಯರು ಸಚೇತನ ಕಾರ್ಯಕ್ರಮ ವಿಷಯವಾಗಿ ಅನುಷ್ಠಾನಾಧಿಕಾರಿಗಳಿಂದ ಪಡೆದ ಮಾಹಿತಿ & ಸಲಹೆಗಳ ಆಧಾರಾದ ಮೇಲೆ ಪ್ರಸ್ತುತ ಶೈಕ್ಷಣಿಕ ಸಾಲಿನಲ್ಲಿ ಕೆಲವು ಬದಲಾವಣೆಯ ನಿರ್ಧಾರ ಕೈಗೊಂಡು ರಾಜ್ಯದಲ್ಲಿರುವ ಸರ್ಕಾರಿ ಕಿರಿಯ,ಹಿರಿಯ ಮತ್ತು ಪ್ರೌಢಶಾಲೆಗಳಿಗೆ ಪ್ರತ್ಯೇಕವಾಗಿ ಬೆಳಗ್ಗಿನ ಪ್ರಾರ್ಥನಾ ಅವಧಿಯ ಚಟುವಟಿಕೆಯ ಕ್ಯಾಲೆಂಡರ್ ರಚಿಸಲು ಜೊತೆಗೆ 46000 ಶಾಲೆಗಳಿಗೆ ತಲುಪಿಸಲು ಸಹಾಯಕವಾಯಿತು. ಪ್ರಸ್ತುತ ರಾಜ್ಯ ಸಂಪನ್ಮೂಲ ತಂಡವು ರಾಜ್ಯದ ಒಂದು ನಿರ್ದಿಷ್ಟ ಜಿಲ್ಲೆಯನ್ನು ಬೇಟಿ ನೀಡಲು ಯೋಜಿಸುತ್ತಿದ್ದು, ಶಾಲಾ ಹಂತದಲ್ಲಿ ಸಚೇತನ ಕಾರ್ಯಕ್ರಮದ ಅನುಷ್ಠಾನದ ಪರಿಣಾಮವನ್ನು ಅರ್ಥಮಾಡಿಕೊಂಡು ಮುಂದಿನ ಶೈಕ್ಷಣಿಕ ಸಾಲಿನ ಸಚೇತನ ಕಾರ್ಯಕ್ರಮವನ್ನು ರೂಪಿಸಲು ಯೋಜಿಸಲಾಗಿದೆ.

## ರಾಜ್ಯ ಸಂಪನ್ಮೂಲ ತಂಡ

ಕರ್ನಾಟಕದಾದ್ಯಂತ ಸಚೇತನ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುತ್ತಿರುವ ಅಧಿಕಾರಿಗಳನ್ನು ಬೆಂಬಲಿಸಲು ರಾಜ್ಯ ಸಂಪನ್ಮೂಲ ತಂಡವು ನಿರ್ದಿಷ್ಟ ಜಿಲ್ಲೆಯ ಡಯಟ್, ಬ್ಲಾಕ್ ಮತ್ತು ಶಾಲಾ ಭೇಟಿ ಮಾಡುವುದರ ಮೂಲಕ ಬೇಟಿಯ ದಾಖಲೀಕರಣ ಮತ್ತು ವರ್ಷಾಂತ್ಯದ ಸೂಕ್ಷ್ಮ ನಾವೀನ್ಯತೆ ಉಪಕ್ರಮವಾದ ಪ್ರಗತಿ ಹೆಜ್ಜೆಯ ಯಶಸ್ವಿ ಅನುಷ್ಠಾನದಲ್ಲಿ ಜಿಲ್ಲೆಗಳಿಗೆ ಸಹಾಯ ಮಾಡಲು ಉಲ್ಲೇಖವಾಗಿ ಕಾರ್ಯನಿರ್ವಹಿಸುತ್ತದೆ. ಸಚೇತನ ಕಾರ್ಯಕ್ರಮದ ಅನುಷ್ಠಾನದ ಗುಣಮಟ್ಟವನ್ನು ಬಲಪಡಿಸಲು, ನಾವೀನ್ಯತೆಗಳನ್ನು ಸೆರೆಹಿಡಿಯಲು, ಉತ್ತಮ ಅಭ್ಯಾಸಗಳನ್ನು ದಾಖಲಿಸಲು ಮತ್ತು ಶಾಲೆಗಳಲ್ಲಿ ಪರಿಣಾಮಕಾರಿ ನಾಯಕತ್ವ ಮತ್ತು ಕಲಿಕಾ ಅಭ್ಯಾಸಗಳನ್ನು ಅಳೆಯುವಲ್ಲಿ ರಾಜ್ಯವನ್ನು ಬೆಂಬಲಿಸಲು ಈ ತಂಡವು ಕಾರ್ಯ ನಿರ್ವಹಿಸುತ್ತಿದ್ದು, ಮುಂದಿನ ಶೈಕ್ಷಣಿಕ ಸಾಲಿನ ಸಚೇತನ ಕಾರ್ಯಕ್ರಮದ ರೂಪುರೇಷೆಗಳನ್ನು ಸಿದ್ಧಪಡಿಸುತ್ತದೆ.



## ರಾಜ್ಯ ಹಂತದ ಸಚೇತನ ಸಂಪನ್ಮೂಲ ತಂಡ ರಚನೆ

ಸಚೇತನ ಕಾರ್ಯಕ್ರವನ್ನು ರಾಜ್ಯ ಹಂತದಲ್ಲಿ ಸಮರ್ಪಕವಾಗಿ ಅನುಷ್ಠಾನಗೊಳಿಸುವ ಸಲುವಾಗಿ ರಾಜ್ಯ ಹಂತದ ಸಂಪನ್ಮೂಲ ತಂಡವನ್ನು ರಚನೆಗೊಂಡಿರುತ್ತದೆ. ಈ ತಂಡದಲ್ಲಿ ಅನುಭವಿ ಸಂಪನ್ಮೂಲ ವ್ಯಕ್ತಿಗಳಿದ್ದು ಸಚೇತನ ಕಾರ್ಯಕ್ರಮದ ಅಡಿಯಲ್ಲಿ ಎದುರಾಗುವ ಸವಾಲುಗಳನ್ನು ಪರಿಹರಿಸಿಕೊಳ್ಳುವ ಬಗ್ಗೆ ಹಾಗೂ ಉತ್ತಮ ಅಂಶಗಳನ್ನು ವಿವಿಧ ಹಂತಗಳಲ್ಲಿ ವಿನಿಮಯ ಮಾಡಿಕೊಳ್ಳುವ ಮೂಲಕ ಹೇಗೆ ಮಕ್ಕಳ ಕಲಿಕೆಯಲ್ಲಿ ಪ್ರಗತಿ ಸಾಧಿಸಬಹುದು ಎಂಬ ವಿಚಾರವಾಗಿ ವಿನೂತನವಾಗಿ ಆಲೋಚಿಸುವ ಮೂಲಕ ಕಾರ್ಯನಿರ್ವಹಿಸುತ್ತಿದೆ.

### ತಂಡದ ಉದ್ದೇಶ

- ವಿವಿಧ ಹಂತದ ತರಬೇತಿ ಕಾರ್ಯಗಾರಗಳಿಗೆ ಸಂಪನ್ಮೂಲಗಳನ್ನು ಒದಗಿಸುವುದು.
- ಸಚೇತನ ಕಾರ್ಯಕ್ರಮದ ಉಪಕ್ರಮಗಳ ಅನುಷ್ಠಾನದಲ್ಲಿ ಮಾರ್ಗದರ್ಶನ ನೀಡುವುದು.
- ಅನುಷ್ಠಾನಾಧಿಕಾರಿಗಳಿಂದ ಅಗತ್ಯ ಹಿಮ್ಮಾಹಿತಿ ಸಂಗ್ರಹಿ ಕ್ರಿಯಾ ಯೋಜನೆ ರೂಪಿಸುವುದು.
- ಸಿದ್ದಪಡಿಸಿದ ಕೈಪಿಡಿ, ಮಾಡ್ಯೂಲ್ ಗಳನ್ನು ವಿಮರ್ಶಿಸಿ ಮೌಲ್ಯವರ್ಧಿಸುವುದು.
- ಉತ್ತಮ ಅಭ್ಯಾಸಗಳನ್ನು ಮತ್ತು ಯಶೋಗಾಥೆಗಳನ್ನು ಸೃಷ್ಟಿಸುವಂತಹ ಡಯಟ್, ಬ್ಲಾಕ್, ಕ್ಲಸ್ಟರ್ ಗಳನ್ನು ಪ್ರಶಂಸಿಸಲು ಪ್ರಗತಿ ಹೆಜ್ಜೆ ಕಾರ್ಯಕ್ರಮದ ಕ್ರಿಯಾ ಯೋಜನೆ ರೂಪಿಸುವುದು.



# ರಾಜ್ಯ ಹಂತದ ಸಚೇತನ ಸಂಪನ್ಮೂಲ ತಂಡದ ಸದಸ್ಯರ ಪಟ್ಟಿ

| SL.NO | Name | Designation | Department |
|---|---|---|---|
| 1 | Hemavati. V | Junior Program Officer | SSK |
| 2 | Vishwanath | State Resource Person | Banglore South DDPI Office |
| 3 | Nagendra Sinnur | DIET Senior Lecturer | Vijayapura DIET |
| 4 | Merry | Teacher | South -1 |
| 5 | Gururaj | Block Resource Person | Shivamogga |
| 6 | Subrahmanya | Block Resource Person | Dakshina Kannada |
| 7 | Umesh | Block Resource Person | South -4 |
| 8 | Sowbhagya | BRP | South -3 |
| 9 | Indira | DIET Lecturer | Yadagiri Dist |
| 10 | Annapurna | DIET Lecturer | Yadagiri Dist |
| 11 | Nagendrappa | ACPI Office | ACPI Office - Kalburgi |





# ಮಕ್ಕಳ ಶಿಕ್ಷಣಕ್ಕಾಗಿ ನಾವು ನೀವು

ಶಿಕ್ಷಣವನ್ನು ಸುಧಾರಿಸಲು ಸಮುದಾಯದ ಭಾಗವಹಿಸುವಿಕೆ ಮತ್ತು ಶಾಲೆಗಳು ಹಾಗೂ ಮಕ್ಕಳ ಕಲಿಕೆಗೆ ಸಂಬಂಧಿಸಿದ ವಿವಿಧ ಹಿತಾಸಕ್ತಿಪಕ್ಷಗಳ (stakeholders) ಸಹಕಾರ ಅಗತ್ಯವಾಗಿದೆ. ಪೋಷಕರು, ಎಸ್.ಡಿ.ಎಂ.ಸಿ (SDMC) ಸದಸ್ಯರು, ನಾಗರಿಕ ಸಮಾಜ ಸಂಸ್ಥೆಗಳು ಹಾಗೂ ಇತರೆ ಭಾಗೀಧಾರರು ಶಾಲೆಗಳಿಗೆ ಬೆಂಬಲ ನೀಡುವಲ್ಲಿ ಮತ್ತು ಮಕ್ಕಳಿಗೆ ಸಕಾರಾತ್ಮಕ ಕಲಿಕಾ ವಾತಾವರಣವನ್ನು ನಿರ್ಮಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತಾರೆ.

ಮುಂದಿನ ವರ್ಷದ ಸಮುದಾಯದ ಅಗತ್ಯಗಳು ಮತ್ತು ಆದ್ಯತೆಗಳನ್ನು ಅರಿತುಕೊಳ್ಳಲು "ಸಮುದಾಯ ಮಟ್ಟದ ದೃಷ್ಟಿಕೋನ ನಿರ್ಮಾಣ ಮತ್ತು ಅಗತ್ಯ ಸಂವೇದನೆ ಕಾರ್ಯಾಗಾರ"ವನ್ನು ಆಯೋಜಿಸಲಾಗುತ್ತದೆ. ಈ ಕಾರ್ಯಾಗಾರವು ಪ್ರಮುಖ ಹಿತಾಸಕ್ತಿಪಕ್ಷಗಳನ್ನು ಒಂದೇ ವೇದಿಕೆಗೆ ತರಿಸಿ, ತಮ್ಮ ಪ್ರದೇಶದಲ್ಲಿನ ಶಿಕ್ಷಣದ ಪ್ರಸ್ತುತ ಪರಿಸ್ಥಿತಿಯನ್ನು ಪರಾಮರ್ಶಿಸಲು ಮತ್ತು ಭವಿಷ್ಯದಲ್ಲಿ ಅವರು ಕಾಣಲು ಬಯಸುವ ಬದಲಾವಣೆಗಳ ಬಗ್ಗೆ ಚರ್ಚಿಸಲು ಅವಕಾಶ ಒದಗಿಸುತ್ತದೆ.

ಈ ಪ್ರಕ್ರಿಯೆ ಮೂಲಕ ಹಸ್ತಕ್ಷೇಪ ಅಗತ್ಯವಿರುವ ಪ್ರಮುಖ ಕ್ಷೇತ್ರಗಳನ್ನು ಗುರುತಿಸಲು ಸಹಾಯವಾಗುತ್ತದೆ ಮತ್ತು ಕರ್ನಾಟಕದ ವ್ಯಾಪಕ ಶಿಕ್ಷಣ ದೃಷ್ಟಿಕೋನ ರೂಪಿಸುವ ಪ್ರಕ್ರಿಯೆಗೆ ಸಹ ಇದು ಮಹತ್ವದ ಮಾಹಿತಿಯನ್ನು ನೀಡುತ್ತದೆ.

**ಕಾರ್ಯಾಗಾರದ ಉದ್ದೇಶ :**

ಈ ಕಾರ್ಯಾಗಾರದ ಉದ್ದೇಶವು ಸಮುದಾಯದ ಅಗತ್ಯಗಳು ಮತ್ತು ಆಶಯಗಳನ್ನು ಅರಿತುಕೊಳ್ಳುವುದು ಹಾಗೂ ಮುಂದಿನ ವರ್ಷದ ಹಸ್ತಕ್ಷೇಪಗಳನ್ನು ಮಾರ್ಗದರ್ಶನ ಮಾಡುವಂತಹ ಅಭಿಪ್ರಾಯಗಳನ್ನು ಸಂಗ್ರಹಿಸುವುದಾಗಿದೆ.



## ಕಾರ್ಯಾಗಾರದಿಂದ ನಿರೀಕ್ಷಿತ ಫಲಿತಾಂಶಗಳು

1. ಭಾಗವಹಿಸುವವರು ತಮ್ಮ ಸಮುದಾಯದ ಶಿಕ್ಷಣಕ್ಕಾಗಿ ಸಾಮೂಹಿಕ ದೃಷ್ಟಿಕೋನ ಹೇಳಿಕೆಯನ್ನು ರೂಪಿಸುತ್ತಾರೆ.
2. ಭಾಗವಹಿಸುವವರು ಸಮುದಾಯ, ಶಾಲೆ ಮತ್ತು ತರಗತಿಗಳಲ್ಲಿ ಅವರು ಕಾಣಲು ಬಯಸುವ ಸ್ಪಷ್ಟ ಬದಲಾವಣೆಗಳು ಹಾಗೂ ವಿದ್ಯಾರ್ಥಿ ಮಟ್ಟದ ಫಲಿತಾಂಶಗಳನ್ನು ಗುರುತಿಸುತ್ತಾರೆ.
3. ಅವರು ಬಯಸುವ ಬದಲಾವಣೆಗಳನ್ನು ಸಾಧಿಸಲು ವಿವಿಧ ಹಿತಾಸಕ್ತಿಪಕ್ಷಗಳ ಪ್ರಮುಖ ಹಂತಗಳು ಮತ್ತು ಪಾತ್ರಗಳನ್ನು ಗುರುತಿಸುತ್ತಾರೆ.





# ಕಾರ್ಯಾಗಾರದಲ್ಲಿ ಹಾಜರಿದ್ದ ಭಾಗೀಧಾರರ ವಿವರ

| SL. NO | District Name | Name | Designation |
|---|---|---|---|
| 1 | Kalburgi | Hanamantha Maradh | SDMC |
| 2 | Kalburgi | Hulagappa | Parent |
| 3 | Kalburgi | Veeresh Teradala | Educationaist |
| 4 | Kalburgi | Malappa | Children |
| 5 | Kalburgi | Anwar pasha | SDMC |
| 6 | Kalburgi | Balanagamma | Educationaist |
| 7 | Kalburgi | Jayashree SH | Educationaist |
| 8 | Kalburgi | Renuka c | Parent |
| 9 | Kalburgi | Renuka Kaladevanahalli | SDMC |
| 10 | Kalburgi | Tejshawini | Children |
| 11 | Kalburgi | Nandaa | Parent |
| 12 | Kalburgi | Pooja | Children |
| 13 | Bangalore | Uday | SDMC |
| 14 | Bangalore | Puttaraju | Parent |
| 19 | Belagavi | Mallappa Enagi | SDMC |
| 20 | Belagavi | Yellappa enagi | SDMC |
| 21 | Belagavi | Umesha P hulamani | Parent |
| 22 | Belagavi (Sirsi) | Pavitra | SDMC |
| 23 | Belagavi (Sirsi) | sharmila | Parent |
| 26 | Mysore | Manjunath R | SDMC |
| 27 | Mysore | Anil Kumar PK | SDMC |
| 28 | Mysore | Mahesh AS | SDMC |

# ರಾಜ್ಯ ಮಟ್ಟದ ಪ್ರಗತಿ ಹೆಜ್ಜೆ

ಗುಣಮಟ್ಟದ ಶಿಕ್ಷಣವು ಪಠ್ಯಕ್ರಮದ ಅನುಷ್ಠಾನಕ್ಕಷ್ಟೇ ಸೀಮಿತವಾಗದೆ, ಶಾಲೆಗಳ ಗುರಿ, ಶಿಕ್ಷಕರ ಬದ್ಧತೆ, ವಿದ್ಯಾರ್ಥಿಗಳ ಸಕ್ರಿಯ ಪಾಲ್ಗೊಳ್ಳುವಿಕೆ ಮತ್ತು ಪೋಷಕರ ಸಹಕಾರ ಇವುಗಳ ಸಮನ್ವಯದ ಫಲವಾಗಿದೆ. ಸರ್ಕಾರಿ ಶಾಲೆಗಳಲ್ಲಿ ಅನೇಕ ಉತ್ತಮ ಅಭ್ಯಾಸಗಳು, ನಾವೀನ್ಯಯುತ ಚಟುವಟಿಕೆಗಳು ಹಾಗೂ ಶಾಲಾಭಿವೃದ್ಧಿ ಉಪಕ್ರಮಗಳ ಅನುಷ್ಠಾನ ನಿರಂತರವಾಗಿ ನಡೆಯುತ್ತಿರುತ್ತವೆ. ಶಾಲೆ, ಕ್ಲಸ್ಟರ್, ಬ್ಲಾಕ್ ಹಾಗೂ ಜಿಲ್ಲಾ ಹಂತದಲ್ಲಿ ನಡೆಯುವ ಶೈಕ್ಷಣಿಕ ಉತ್ತಮ ಅಭ್ಯಾಸಗಳ ಪರಸ್ಪರ ಹಂಚಿಕೆಗಾಗಿ ವೇದಿಕೆಗಳನ್ನು ನಿರ್ಮಿಸುವ ಅಗತ್ಯತೆಯನ್ನು ಮನಗೊಂಡು ರೂಪುಗೊಂಡ ಕಾರ್ಯಕ್ರಮವೆ "ಪ್ರಗತಿ ಹೆಜ್ಜೆ".

ರಾಜ್ಯ ಹಂತದಲ್ಲಿ ಪ್ರತಿ ಶಾಲೆಯಲ್ಲಿ ವಿಭಿನ್ನವಾದ ಸಣ್ಣ-ಸಣ್ಣ ನಾವೀನ್ಯ ಪ್ರಯತ್ನಗಳು ನಡೆಯುತ್ತಿದ್ದು, ಅವುಗಳು ವಿದ್ಯಾರ್ಥಿಗಳ ಕಲಿಕೆಯ ಮೇಲೆ ಉತ್ತಮ ಪರಿಣಾಮವನ್ನು ಬೀರುತ್ತವೆ.
ಈ ಹಿನ್ನೆಲೆಯಲ್ಲಿ ಪ್ರತಿ ಜಿಲ್ಲೆಗಳಲ್ಲಿ ಅನುಷ್ಠಾನಗೊಳ್ಳುತ್ತಿರುವ ಶಾಲಾಭಿವೃದ್ಧಿ ಉಪಕ್ರಮಗಳು, ನಾವೀನ್ಯ ಚಟುವಟಿಕೆಗಳು / ಯಶೋಗಾಥೆಗಳು ಹಾಗೂ ಮಕ್ಕಳಲ್ಲಿ ಉಂಟಾದ ಅನುಭವಾತ್ಮಕ ಕಲಿಕೆಯನ್ನು ಗುರುತಿಸಿ, ವಿವಿಧ ಹಂತಗಳಲ್ಲಿ ಹಂಚಿಕೊಳ್ಳುವ ಮೂಲಕ ಪರಸ್ಪರ ಅಭಿನಂದಿಸುವುದರಿಂದ ಮತ್ತಷ್ಟು ವಿನೂತನ ಯಶೋಗಾಥೆಗಳು ಸೃಷ್ಟಿಸಲು ಸಹಕಾರಿಯಾಗುತ್ತದೆ.

"ಸಾಧ್ಯವೆಂದರೆ ಸಾಧ್ಯ" ಎಂಬ ಆತ್ಮವಿಶ್ವಾಸ, ಶೈಕ್ಷಣಿಕ ನಾಯಕರಲ್ಲಿ ಧನಾತ್ಮಕ ಚಿಂತನೆಯನ್ನು ಪ್ರೇರೇಪಿಸುತ್ತದೆ. ಇದರ ಮೂಲಕ ಜಿಲ್ಲೆಗಳ ನಡುವೆ ಸಕಾರಾತ್ಮಕ ಹಾಗೂ ಸ್ಪರ್ಧಾತ್ಮಕ ಮನೋಭಾವ ಬೆಳೆದು ನವೀನ ಪ್ರಯೋಗಗಳನ್ನು ತಮ್ಮ ಜಿಲ್ಲೆಗಳಲ್ಲಿ ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ ಶೈಕ್ಷಣಿಕ ನಾಯಕರಲ್ಲಿ ಅಪೇಕ್ಷಿತ ಪರಿವರ್ತನೆ ರೂಪುಗೊಳ್ಳುತ್ತದೆ.



ರಾಜ್ಯಹಂತದ ಪ್ರಗತಿ ಹೆಜ್ಜೆ ಕಾರ್ಯಕ್ರಮವನ್ನು ಶ್ರೀ ಹೆಚ್. ಶಶಿಧರಶೆಟ್ಟಿ, ಗೌರವಾನ್ವಿತ ಜಿಲ್ಲಾ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿಗಳು, ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಇವರು ಉದ್ಘಾಟನೆಯನ್ನು ನೆರವೇರಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಡಾ. ಸತೀಶ್ ಹೊಸಮನಿ, ನಿರ್ದೇಶಕರು, ಕಾರ್ಯಕ್ರಮ, ಸಮಗ್ರ ಶಿಕ್ಷಣ ಕರ್ನಾಟಕ ಇವರು ಉಪಸ್ಥಿತರಿದ್ದರು.

ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿ ಡಾ.ಎಚ್.ಬಿ.ಚಂದ್ರಶೇಖರ್, ನಿವೃತ್ತ ಹಿರಿಯ ಉಪನ್ಯಾಸಕರು. ಶ್ರೀ ವೆಂಕಟೇಶ್ ಟಿ, ಸದಸ್ಯರು, ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ. ಶ್ರೀಮತಿ ಹೇಮಾವತಿ.ವಿ, ಕಿರಿಯ ಕಾರ್ಯಕ್ರಮ ಅಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ. ಹಾಗೂ ಶ್ರೀ ವಿಶ್ವನಾಥ್ ಕೆ.ವಿ, ಜಿಲ್ಲಾ ಸಮನ್ವಯಾಧಿಕಾರಿಗಳು,ಉಪನಿರ್ದೇಶಕರ ಕಚೇರಿ, ಬೆಂಗಳೂರು ನಗರ ಜಿಲ್ಲೆ. ಇವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಪ್ರಕ್ರಿಯೆ :

- ಶಾಲಾಭಿವೃದ್ಧಿ ಉಪಕ್ರಮಕ್ಕೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಅನುಷ್ಠಾನ ಮಾಡಿರುವ ಉತ್ತಮ ಅಭ್ಯಾಸಗಳು/ಕಾರ್ಯ ಪ್ರಕ್ರಿಯೆಗಳು/ ಸೂಕ್ಷ್ಮ ಆವಿಷ್ಕಾರಗಳನ್ನು ಪ್ರಸ್ತುತ ಪಡಿಸುವುದು.
- ರಾಜ್ಯದ ಪ್ರತಿ ಡಯಟ್ ನ ಪ್ರತಿನಿಧಿಯಾಗಿ ಸಚೇತನ ನೋಡಲ್ ಅಧಿಕಾರಿಗಳು, ಅತ್ಯುತ್ತಮವಾಗಿ ಸಚೇತನ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿದ ಒಬ್ಬರು ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳು ಹಾಗು ಒಬ್ಬರು ಸಮೂಹ ಸಂಪನ್ಮೂಲ ವ್ಯಕ್ತಿಗಳನ್ನು ಒಳಗೊಂಡಂತೆ ಪ್ರತಿ ಜಿಲ್ಲೆಯಿಂದ 3 ಜನರಿಗೆ ಭಾಗವಹಿಸಿ ಪ್ರಸ್ತುತ ಪಡಿಸಲು ಅವಕಾಶ ಇರುತ್ತದೆ.
- ಪ್ರತಿ ಜಿಲ್ಲೆಗೆ 5 ನಿಮಿಷ ಪ್ರಸ್ತುತ ಪಡಿಸಲು ಅವಕಾಶ ನೀಡಲಾಗಿದ್ದು , ಎಲ್ಲಾ ಶಾಲಾಭಿವೃದ್ಧಿ ಉಪಕ್ರಮಗಳನ್ನು ಅದೇ ಸಮಯದಲ್ಲಿ ಮುಕ್ತಾಯಗೊಳಿಸಬೇಕು .
- ಇಲಾಖೆಯಿಂದ ಪ್ರತಿನಿಧಿಸಿರುವ ಸಂಪನ್ಮೂಲ ವ್ಯಕ್ತಿಗಳು / ಸುಗಮಕಾರರು ಏನಾದರು ಗೊಂದಲ ಅಥವಾ ಪ್ರಶ್ನೆಗಳು ಇದ್ದಲ್ಲಿ 2 ನಿಮಿಷ ಆಯಾ ಜಿಲ್ಲೆಯ ಪ್ರತಿನಿಧಿಗಳಿಗೆ ಕೇಳುತ್ತಾರೆ .



**ಜಿಲ್ಲಾವಾರು ಶಾಲಾಭಿವೃದ್ಧಿ ಉಪಕ್ರಮಗಳ ಪ್ರಸ್ತುತಿ**

ಕಾರ್ಯಕ್ರಮದಲ್ಲಿ ರಾಜ್ಯದ 34 ಡಯಟ್‌ಗಳಿಂದ ಆಗಮಿಸಿದ್ದ ಸಚೇತನ ಅನುಷ್ಠಾನಾಧಿಕಾರಿಗಳು (ಒಬ್ಬರು ಹಿರಿಯ ಉಪನ್ಯಾಸಕರು, ಒಬ್ಬರು ಬಿ.ಆರ್.ಸಿ ಮತ್ತು ಒಬ್ಬರು ಸಿ.ಆರ್.ಪಿ ಹಾಜರಿದ್ದರು) ತಮ್ಮ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಿರುವ ಕಾರ್ಯಕ್ರಮಗಳು, ನಾವಿನ್ಯತೆಗಳು ಹಾಗೂ ಮಕ್ಕಳ ಹಕ್ಕುಗಳ ರಕ್ಷಣೆಗೆ ಕೈಗೊಂಡ ಕ್ರಮಗಳ ಕುರಿತು ಪ್ರಸ್ತುತಪಡಿಸಿದರು.

**ಜಿಲ್ಲಾ ಪ್ರಸ್ತುತಿಗಳು**

- ಮಕ್ಕಳ ಹಕ್ಕುಗಳ ರಕ್ಷಣೆ
  (POCSO, ಬಾಲಕಾರ್ಮಿಕ, ಬಾಲ್ಯ ವಿವಾಹ, ಕಾನೂನಿನ ಅರಿವು)
- ಬೆಳಗಿನ ಪ್ರಾರ್ಥನಾ ಚಟುವಟಿಕೆಗಳ ಪರಿಣಾಮ
- Mega PTM ಮತ್ತು ಪೋಷಕರ ಸಬಲೀಕರಣ
- FLN ಸಾಧನೆ ಮತ್ತು ಅನುಸರಣೆ ಕ್ರಮಗಳು
- ಮನೆ ಹಾಗೂ ಕ್ಷೇತ್ರ ಭೇಟಿ, ಪ್ರಗತಿ ಪರಿಶೀಲನೆ
- ವಿದ್ಯಾರ್ಥಿಗಳ ಆತ್ಮವಿಶ್ವಾಸ, ನಾಯಕತ್ವ ಹಾಗೂ ದಾಖಲಾತಿ ಹೆಚ್ಚಳ

**ಪ್ರಮುಖ ಅಂಶಗಳು:**

- ಮನೆಯಲ್ಲಿ ಓದುವ ಮೂಲೆ
- ಸ್ಫೂರ್ತಿ ಪತ್ರಿಕೆ
- Friday Friend
- ನನ್ನ ನಡೆ ಶಾಲೆ ಕಡೆ
- ಕಲಿಕಾ ಹಬ್ಬ
- Eat Well ಕಾರ್ಯಕ್ರಮ

**ಜಿಲ್ಲಾ ನಾವಿನ್ಯತೆಗಳು**



# ಸಚೇತನ ಕಾರ್ಯಕ್ರಮದ  ವಿಷನ್ ಕಾರ್ಯಾಗಾರ

## ಪರಿಚಯ ಮತ್ತು ಉದ್ದೇಶ

ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವ ಉದ್ದೇಶದಿಂದ ಜಿಲ್ಲಾ/ತಾಲ್ಲೂಕು ಮಟ್ಟದ ಅಧಿಕಾರಿಗಳು, ಬಿಆರ್‌ಸಿ ಮತ್ತು ಸಿಆರ್‌ಪಿ ಸಿಬ್ಬಂದಿ ಹಾಗೂ ಶಾಲಾ ನಾಯಕರಿಗಾಗಿ "ವಿಷನ್ ವರ್ಕ್‌ಶಾಪ್" ಆಯೋಜಿಸಲಾಯಿತು. ಈ ಕಾರ್ಯಾಗಾರದ ಮುಖ್ಯ ಉದ್ದೇಶವು ಶಾಲಾ ವ್ಯವಸ್ಥೆಯಲ್ಲಿ ನಡೆಯುತ್ತಿರುವ ವಿವಿಧ ಉಪಕ್ರಮಗಳ ಅನುಷ್ಠಾನವನ್ನು ಪರಿಶೀಲಿಸಿ, ಸವಾಲುಗಳನ್ನು ಗುರುತಿಸಿ, ಸ್ಪಷ್ಟವಾದ ಗುರಿಗಳನ್ನು ರೂಪಿಸಿ ಹಾಗೂ ಪರಿಣಾಮಕಾರಿ ಕಾರ್ಯತಂತ್ರಗಳನ್ನು ಅಭಿವೃದ್ಧಿಪಡಿಸುವುದಾಗಿತ್ತು.

ಈ ಕಾರ್ಯಾಗಾರದಲ್ಲಿ "ಸಚೇತನ ಕಾರ್ಯಕ್ರಮ", ಬೆಳಗಿನ ಪ್ರಾರ್ಥನಾ ಅವಧಿ, ಪೋಷಕರ ಸಬಲೀಕರಣ ಚಟುವಟಿಕೆಗಳು ಹಾಗೂ ಶಾಲಾ ಮಟ್ಟದ ಕಾರ್ಯತಂತ್ರಗಳ ಕುರಿತು ಸಮಗ್ರ ಚರ್ಚೆ ನಡೆಸಲಾಯಿತು.

## ಪ್ರಮುಖ ಮಾರ್ಗದರ್ಶನ (Guidance by Resource Person)

- ಕಾರ್ಯಾಗಾರದ ವೇಳೆ ವಿಶ್ವನಾಥ ಜಿಲ್ಲಾ ಸಮನ್ವಯ ಅಧಿಕಾರಿಗಳು,ಬೆಂಗಳೂರು ದಕ್ಷಿಣ ರವರು  ವಿಶೇಷ ಸಂಪನ್ಮೂಲ ವ್ಯಕ್ತಿಗಳಾಗಿ  ಮಾರ್ಗದರ್ಶನ ನೀಡಿದರು:
- ವರ್ಷಪೂರ್ತಿ ಯೋಜನೆ (Year Plan) ಅನ್ನು "M4C" ಜೊತೆಗೆ ಸಂಯೋಜಿಸಿ ತಯಾರಿಸಬೇಕು.
- ಸರ್ಕಾರದಿಂದ ಬರುವ ಅನೇಕ ಯೋಜನೆಗಳ ನಡುವೆ ಗೊಂದಲ ಉಂಟಾಗುವ ಸಾಧ್ಯತೆಗಳಿರುತ್ತವೆ , ಆದ್ದರಿಂದ ಸ್ಪಷ್ಟವಾದ ಗುರಿಗಳು (Goals) ಮತ್ತು ಉದ್ದೇಶಗಳು (Objectives) ಇರಬೇಕು.
- ಗುಣಮಟ್ಟದ ಶಿಕ್ಷಣ (Quality Education) ಸರ್ಕಾರದ ಪ್ರಮುಖ ಆಶಯವಾಗಿದೆ.



## ಮುಖ್ಯ ಅಂಶಗಳು:

- SOP (Standard Operating Procedure) ಅನುಸರಣೆ ಅಗತ್ಯ.
- ವರ್ಷದ ಕೊನೆಯಲ್ಲಿ ಶಿಕ್ಷಕರಲ್ಲಿ ಉತ್ಸಾಹ ಕುಂದುವುದು ಮತ್ತು ಕೆಲಸದ ಒತ್ತಡ ಹೆಚ್ಚುವುದು ಸಾಮಾನ್ಯ ಸವಾಲು.
- ಗುರಿ ಸ್ಪಷ್ಟವಾಗಿಲ್ಲದಿದ್ದರೆ ಸವಾಲುಗಳನ್ನು ಗುರುತಿಸಲು ಸಾಧ್ಯವಾಗುವುದಿಲ್ಲ.

## ಸವಾಲುಗಳ ವಿಶ್ಲೇಷಣೆ (Challenges Analysis)

ಚರ್ಚೆಯಲ್ಲಿ ಪ್ರಮುಖವಾಗಿ ಗುರುತಿಸಲಾದ ಸವಾಲುಗಳು:-

- **ಟಾಪ್-ಡೌನ್ ವಿಧಾನ:** ಮೇಲಿನಿಂದ ಕೆಳಗೆ ಬರುವ ಸೂಚನೆಗಳ ಪರಿಣಾಮವಾಗಿ ಸ್ಥಳೀಯ ಅಗತ್ಯತೆಗಳಿಗೆ ಸರಿಯಾದ ಸ್ಪಂದನೆ ಇಲ್ಲ.
  "ಡೌನ್-ಟು-ಟಾಪ್" (Bottom-up approach) ವಿಧಾನವನ್ನು ಅಳವಡಿಸಿಕೊಳ್ಳುವುದು ಅಗತ್ಯ.
- **ತರಗತಿ ನಿರ್ವಹಣೆ:** 40 ವಿದ್ಯಾರ್ಥಿಗಳಿರುವ ತರಗತಿಯಲ್ಲಿ ಒಬ್ಬ ಶಿಕ್ಷಕರಿಗೆ ಎಲ್ಲ ವಿದ್ಯಾರ್ಥಿಗಳ ಕಲಿಕೆ ಹೊಣೆಗಾರಿಕೆ ದೊಡ್ಡ ಸವಾಲಾಗಿದೆ.
- **ವಿದ್ಯಾರ್ಥಿಗಳ ಕಲಿಕೆ ಮಟ್ಟ:** ಕೆಲವರು ಪದಗಳನ್ನು ಸರಿಯಾಗಿ ಉಚ್ಚರಿಸಲು ಸಾಧ್ಯವಾಗುತ್ತಿಲ್ಲ.
  "ಓದು ಕರ್ನಾಟಕ" ಕಾರ್ಯಕ್ರಮದ ಮೂಲಕ ಮೌಲ್ಯಮಾಪನದ ಸರಿಯಾದ ವಿಧಾನಗಳ ಅಗತ್ಯತೆ.
- **ಸಮುದಾಯದ ಭಾಗವಹಿಸುವಿಕೆಯ ಕೊರತೆ:** ಶಿಕ್ಷಣ ವ್ಯವಸ್ಥೆ ಸಮುದಾಯ ಆಧಾರಿತವಾಗಿರಬೇಕು.
- **ಸಂಪನ್ಮೂಲ ಬಳಕೆ:** ಲಭ್ಯವಿರುವ ಸಂಪನ್ಮೂಲಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವಲ್ಲಿ ಕೊರತೆ.



## ಪರಿಹಾರ ಮಾರ್ಗಗಳು ಮತ್ತು ವಿಷನ್ ನಿರ್ಮಾಣ:

ಗುಂಪು ಚರ್ಚೆಯ ಆಧಾರದ ಮೇಲೆ ಕೆಳಗಿನ ಪರಿಹಾರ ಮಾರ್ಗಗಳನ್ನು ಗುರುತಿಸಲಾಯಿತು:

**ಸ್ಪಷ್ಟ ಗುರಿ ನಿರ್ಧಾರ (North Star):** ಶಾಲಾ ಮಟ್ಟದಲ್ಲಿ ಒಂದೇ ಪ್ರಮುಖ ಗುರಿಯನ್ನು ನಿಗದಿಪಡಿಸಿ ಎಲ್ಲಾ ಚಟುವಟಿಕೆಗಳನ್ನು ಪೂರಕವಾಗಿ ಅನುಷ್ಠಾನ ಮಾಡಬೇಕು.

**ಕಾರ್ಯತಂತ್ರ ರೂಪಿಸುವಿಕೆ:** 45 ನಿಮಿಷಗಳ ಪಾಠದ ಅವಧಿಯಲ್ಲಿ ವಿದ್ಯಾರ್ಥಿಗಳ ಸಕ್ರಿಯ ಕಲಿಕೆಗೆ ಆದ್ಯತೆ ನೀಡಬೇಕು.

**ಸಮುದಾಯ ಆಧಾರಿತ ಶಿಕ್ಷಣ:** ಶಾಲೆ ಮತ್ತು ಸಮುದಾಯದ ನಡುವೆ ಬಲವಾದ ಸಂಪರ್ಕ ನಿರ್ಮಿಸಬೇಕು.

**ಜವಾಬ್ದಾರಿ:** ಪ್ರತಿ ಹಂತದಲ್ಲೂ ಜವಾಬ್ದಾರಿ ಹಂಚಿಕೆ ಸ್ಪಷ್ಟವಾಗಿರಬೇಕು.

**ಸಂಪನ್ಮೂಲ ಬಳಕೆ:** ಲಭ್ಯವಿರುವ ಹಣಕಾಸು ಮತ್ತು ಮಾನವ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಬಳಸಬೇಕು.

## ಗುಂಪು ಚರ್ಚೆ

ರಾಜ್ಯದ 34 ಡಯಟ್ ಗಳಿಂದ ಬಂದಿರುವ ಸಂಪನ್ಮೂಲ ವ್ಯಕ್ತಿಗಳನ್ನು ಗುಂಪುಗಳಾಗಿ ವಿಂಗಡಿಸಿ ಈ ಕೆಳಗಿನ ವಿಷಯಗಳ ಕುರಿತು ಚರ್ಚೆಯನ್ನು ನಡೆಸಲಾಯಿತು.

- ಶಾಲಾ, ಕ್ಲಸ್ಟರ್, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಸವಾಲುಗಳು
- ಶೈಕ್ಷಣಿಕ, ವ್ಯವಸ್ಥಾತ್ಮಕ ಮತ್ತು ಸಾಮಾಜಿಕ ಸಮಸ್ಯೆಗಳು
- ಸಮಸ್ಯೆಗಳ ಮೂಲ ಕಾರಣ (Why, What, How) ವಿಶ್ಲೇಷಣೆ
- ಕಾರ್ಯೋನ್ಮುಖ ಪರಿಹಾರಗಳ ರೂಪಿಸುವಿಕೆ



### ಮುಖ್ಯ ನಿರ್ಣಯಗಳು:

- ಸಮಸ್ಯೆಗಳನ್ನು ಸರಿಯಾಗಿ ಗುರುತಿಸುವುದು ಮುಖ್ಯ.
- ವ್ಯವಸ್ಥೆಯೊಳಗೆ ಹೊಂದಿಕೊಳ್ಳುವುದಕ್ಕಿಂತ ವ್ಯವಸ್ಥೆಯನ್ನು ಸುಧಾರಿಸುವ ಮನೋಭಾವ ಬೆಳೆಸಬೇಕು.
- ಪ್ರತಿ ವ್ಯಕ್ತಿಯೂ ತಮ್ಮ ಜವಾಬ್ದಾರಿಯನ್ನು ಅರಿತು ಕಾರ್ಯನಿರ್ವಹಿಸಬೇಕು.
- ನೀತಿ ರೂಪಿಸುವ ಮಟ್ಟಕ್ಕೆ ತಲುಪುವ ದೃಷ್ಟಿಕೋನವನ್ನು ಬೆಳೆಸಬೇಕು.

### ಪರಿಹಾರ ದೃಷ್ಟಿಕೋನ ಮತ್ತು ಕ್ರಮಗಳು

ಚರ್ಚೆಯ ಆಧಾರದ ಮೇಲೆ ಕೆಳಗಿನ ಪರಿಹಾರ ಮಾರ್ಗಗಳು:

- ಸಹಕಾರದ ಮೂಲಕ ಪರಿಹಾರ: ಸಮುದಾಯ, SDMC, ಶಿಕ್ಷಕರು ಮತ್ತು ಆಡಳಿತದ ಸಹಕಾರ ಅಗತ್ಯ.
- ಸಂಪರ್ಕ ಮತ್ತು ಸಂವಹನ: ಸಣ್ಣ ಗುಂಪು ಸಭೆಗಳು, ವಾಟ್ಸಾಪ್ ಗುಂಪುಗಳು ಮತ್ತು ವೇಗದ ಚರ್ಚೆಗಳು ಸಮಸ್ಯೆ ಪರಿಹಾರಕ್ಕೆ ಸಹಕಾರಿ.
- ಸೌಲಭ್ಯ ಮತ್ತು ಪ್ರವೇಶ (Access & Retention): KGVP ಶಾಲೆಗಳಂತಹ ಉಪಕ್ರಮಗಳನ್ನು ಸಮರ್ಪಕವಾಗಿ ಬಳಸುವುದು.
- ಪಾತ್ರ ಸ್ಪಷ್ಟತೆ (Role Clarity): ಪ್ರತಿ ಹಂತದಲ್ಲಿಯೂ ತಮ್ಮ ಪಾತ್ರವನ್ನು ಸ್ಪಷ್ಟವಾಗಿ ಅರಿತು ಕಾರ್ಯನಿರ್ವಹಿಸಬೇಕು.
- ಜವಾಬ್ದಾರಿ ಮತ್ತು ಉತ್ತರದಾಯಕತೆ: ಕಾರ್ಯಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ಹೊಣೆಗಾರಿಕೆ ಹೆಚ್ಚಿಸಬೇಕು.



| ಕ್ರಮ ಸಂಖ್ಯೆ | ಹುದ್ದೆ | ಹಾಜರಾದ ಭಾಗಿಧಾರರ ಸಂಖ್ಯೆ |
|---|---|---|
| 1 | ಹಿರಿಯ ಉಪನ್ಯಾಸಕರು/ ಉಪನ್ಯಾಸಕರು | 30 |
| 2 | ಬಿ.ಆರ್.ಸಿ / ಬಿ.ಆರ್.ಪಿ | 42 |
| 3 | ಸಿ.ಆರ್.ಪಿ | 30 |
| 4 | ಅರೆಕಾಲಿಕ ಕಾನೂನು ಸ್ವಯಂ ಸೇವಕರು | 26 |

**ಅರೆಕಾಲಿಕ ಕಾನೂನು ಸ್ವಯಂ ಸೇವಕರ ಸಭೆ :**

ಹಿರಿಯ ನ್ಯಾಯಾಧೀಶರು ಹಾಗೂ ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಶ್ರೀ ಎಚ್. ಶಶಿಧರ ಶೆಟ್ಟಿ ರವರು ಮಾತನಾಡಿ, ಮಕ್ಕಳಿಗೆ ಕಾನೂನು ಅರಿವಿನ ಅಗತ್ಯತೆ ಬಗ್ಗೆ ಹಾಗೂ ಇತ್ತೀಚಿನ ದಿನಗಳಲ್ಲಿ ಕಂಡುಬರುತ್ತಿರುವ ಬಾಲ್ಯ ವಿವಾಹ, ಬಾಲ ಕಾರ್ಮಿಕತೆ ಮತ್ತು ಲೈಂಗಿಕ ದೌರ್ಜನ್ಯಗಳಂತಹ ಸಮಸ್ಯೆಗಳ ವಿರುದ್ಧ ಧ್ವನಿ ಎತ್ತುವಂತೆ ಅಧಿಕಾರಿಗಳಿಗೆ ತಿಳಿಸಿದರು. ಇತ್ತೀಚಿನ ದಿನಗಳಲ್ಲಿ ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳು ಹೆಚ್ಚಾಗಿರುವುದರಿಂದ, ಇದಕ್ಕೆ ಸಂಬಂಧಿಸಿದಂತೆ ಕಾನೂನು ಸಹಾಯವಾಣಿಗಳ ಬಗ್ಗೆ ಮತ್ತು ಎಲ್ಲಾ ಜಿಲ್ಲೆಗಳಲ್ಲಿ ಇರುವ ಅರೆಕಾಲಿಕ ಕಾನೂನು ಸ್ವಯಂಸೇವಕರ ನೆರವನ್ನು ಪಡೆಯುವಂತೆ ತಿಳಿಸಿದರು. ಕಾನೂನು ಸ್ವಯಂಸೇವಕರು ತಾಲೂಕು, ಜಿಲ್ಲಾ ಮತ್ತು ರಾಜ್ಯ ಹಂತಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಯಾವುದೇ ರೀತಿಯ ಕಾನೂನು ಸಹಕಾರವನ್ನು ಇವರ ಮೂಲಕ ಪಡೆಯಬಹುದೆಂದು ತಿಳಿಸಿದರು.

ನಂತರ ಮಾತನಾಡಿದ ವೆಂಕಟೇಶ್ ಟಿ, ಸದಸ್ಯರು, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ರವರು, ರಾಜ್ಯದಾದ್ಯಂತ ಕಾರ್ಯನಿರ್ವಹಿಸುತ್ತಿರುವ ಅರೆಕಾಲಿಕ ಕಾನೂನು ಸ್ವಯಂಸೇವಕರನ್ನು ಉದ್ದೇಶಿಸಿ ಅವರ ಪಾತ್ರ, ಹಾಗೂ ಜವಾಬ್ದಾರಿಗಳನ್ನು ಸ್ವಯಂಸೇವಕರೊಂದಿಗೆ ಚರ್ಚಿಸಿ ತಿಳಿಸಿದರು. ನಂತರ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಸ್ವಯಂಸೇವಕರೊಂದಿಗೆ ಪ್ರತ್ಯೇಕವಾಗಿ ಚರ್ಚೆ ನಡೆಸಿ, ಪ್ರಾಧಿಕಾರದ ಧ್ಯೇಯ-ಉದ್ದೇಶಗಳು ಹಾಗೂ ಪ್ರಮುಖ ಕಾನೂನು ವಿಷಯಗಳನ್ನು ಹಂಚಿಕೊಂಡರು. ಅರೆಕಾಲಿಕ ಸ್ವಯಂಸೇವಕರು ತಿಳಿದುಕೊಳ್ಳಬೇಕಾದ ನಿರ್ದಿಷ್ಟ ಕಾನೂನುಗಳ ಕುರಿತು ತಿಳಿಸುತ್ತಾ, ಮುಂದಿನ ದಿನಗಳಲ್ಲಿ ಅದಕ್ಕೆ ಸಂಬಂಧಿಸಿದ ಕೈಪಿಡಿಯನ್ನು ಸಿದ್ಧಪಡಿಸಿ ಎಲ್ಲರಿಗೂ ತಲುಪಿಸುವುದಾಗಿ ಭರವಸೆ ನೀಡಿದರು. ನಂತರ ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದಂತೆ ಜಿಲ್ಲೆಗಳಲ್ಲಿ ಶಿಕ್ಷಣ ಇಲಾಖೆಯೊಂದಿಗೆ ಸಮನ್ವಯವಾಗಿ ಕಾರ್ಯನಿರ್ವಹಿಸುವ ಮಾರ್ಗಗಳನ್ನು ಮನವರಿಕೆ ಮಾಡಿದರು.

ಜೊತೆಗೆ, ಅರೆಕಾಲಿಕ ಸ್ವಯಂಸೇವಕರಿಗೆ ಇರುವ ಸವಾಲುಗಳು, ಜನರು ಇವರನ್ನು ಗುರುತಿಸಲು ಆಗುತ್ತಿರುವ ಸಮಸ್ಯೆಗಳು, ಸ್ವಯಂಸೇವಕರಿಗೆ ಅಗತ್ಯವಿರುವ ಗುರುತಿನ ಚೀಟಿ ಸೇರಿದಂತೆ ಇನ್ನಿತರ ಹಲವಾರು ವಿಷಯಗಳ ಕುರಿತು ಚರ್ಚೆಗಳು ನಡೆಯಿತು. ಇದರೊಂದಿಗೆ, ನಿರಂತರವಾಗಿ ಸಭೆಗಳನ್ನು ನಡೆಸಿ ಅಗತ್ಯ ಅಂಶಗಳನ್ನು ಚರ್ಚಿಸಿ, ಯಾವುದೇ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ವೇದಿಕೆಯಾಗಿ ಬಳಸಿಕೊಳ್ಳುವಂತೆ ತಿಳಿಸಿದರು.



# ಬೆಳಗಿನ ಪ್ರಾರ್ಥನಾ ಅವಧಿ ಚಟುವಟಿಕೆ ಉಪಕ್ರಮ




ಮಕ್ಕಳು ಕಲಿಕಾ ಪ್ರಕ್ರಿಯೆಯು ಪ್ರತಿ ಹಂತದಲ್ಲೂ ನಡೆಯುತ್ತದೆ ಶಾಲೆ, ತರಗತಿ, ಮನೆ ಹಾಗೂ ಸಮೂದಾಯ ಅದರಲ್ಲಿ ಮುಖ್ಯವಾಗಿ ಶಾಲೆಯಲ್ಲಿ ನಡೆಯುವ ಪ್ರತಿಯೊಂದು ಚಟುವಟಿಕೆಯಲ್ಲಿ ಮಕ್ಕಳಿಗೆ ಕಲಿಯುವ ಅವಕಾಶವಿದೆ. ಮಕ್ಕಳಿಗೆ ತಮ್ಮ ಅನುಭವ ಹಾಗೂ ಪ್ರತಿಭೆಯನ್ನು ಪ್ರದರ್ಶನ ಮಾಡಲು ಶಾಲೆಯಲ್ಲಿ ನಡೆಯುವ ಬೆಳಗಿನ ಪ್ರಾರ್ಥನಾ ಅವಧಿ ಚಟುವಟಿಕೆಗಳು ಪ್ರಮುಖ ಪಾತ್ರವಹಿಸುತ್ತವೆ ಹಾಗೂ ಮಕ್ಕಳಿಗೆ ಹಾಗೂ ಶಿಕ್ಷಕರಿಗೆ ಆ ದಿನಕ್ಕೆ ಸಕಾರಾತ್ಮಕ ಆರಂಭವನ್ನು ಒದಗಿಸುತ್ತದೆ, ವಿದ್ಯಾರ್ಥಿಗಳನ್ನು ತರಗತಿಗೆ ಸಿದ್ಧಪಡಿಸುತ್ತದೆ. ಬೆಳಗಿನ ಪ್ರಾರ್ಥನಾ ಅವಧಿಯ ಕಾರ್ಯಕ್ರಮದ ಮುಖ್ಯ ಗುರಿ ಎಲ್ಲಾ ವಿದ್ಯಾರ್ಥಿಗಳು ಭಾಗವಹಿಸುವಂತೆ ಮಾಡುವುದು, ನಾಯಕತ್ವ ಮತ್ತು ಆತ್ಮವಿಶ್ವಾಸದ ಕೌಶಲ್ಯಗಳನ್ನು ಬೆಳೆಸಲು ಒಂದು ವೇದಿಕೆಯನ್ನು ಒದಗಿಸುವುದಾಗಿದೆ.

**ಉದ್ದೇಶಗಳು:**

- ಮಕ್ಕಳಿಗೆ ವಿವಿಧ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ವೇದಿಕೆಯನ್ನು ಒದಗಿಸಿ, ಅವರನ್ನು ಕಲಿಕೆಯಲ್ಲಿ ತೊಡಗಿಸಿಕೊಳ್ಳುವಿಕೆ, ಒಳಗೊಳ್ಳುವಿಕೆ ಮತ್ತು ನಾಯಕತ್ವ ಕೌಶಲ್ಯಗಳನ್ನು ಬೆಳೆಸಿಕೊಳ್ಳಲು ಸಹಾಯ ಮಾಡುವುದು.
- ಮಕ್ಕಳ ದೈಹಿಕ, ಸಾಮಾಜಿಕ, ಭಾವನಾತ್ಮಕ ಮತ್ತು ಬೌದ್ಧಿಕ ಬೆಳವಣಿಗೆಗೆ ಪೂರಕವಾದ ಚಟುವಟಿಕೆಗಳನ್ನು ಸೇರಿಸುವ ಮೂಲಕ ಅವರ ಸಮಗ್ರ ಬೆಳವಣಿಗೆಗೆ ಅವಕಾಶಗಳನ್ನು ಸೃಷ್ಟಿಸುವುದು.
- ಮಕ್ಕಳು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು, ತಮ್ಮನ್ನು ತಾವು ವ್ಯಕ್ತಪಡಿಸಲು ಮತ್ತು ವೇದಿಕೆಯಲ್ಲಿ ಮಾತನಾಡಲು ಪ್ರೋತ್ಸಾಹಿಸುವಂತೆ ಮಾಡುವುದು.
- ಪ್ರತಿದಿನವನ್ನು ಸಕಾರಾತ್ಮಕವಾಗಿ ಮತ್ತು ಸಹಯೋಗದಿಂದ ಪ್ರಾರಂಭಿಸಲು ಪ್ರತಿದಿನವನ್ನು ವಿದ್ಯಾರ್ಥಿಗಳು ಉತ್ತಮವಾಗಿ ಆರಂಭ ಮಾಡಲು ಬೆಳಗಿನ ಪ್ರಾರ್ಥನಾ ಅವಧಿ ಚಟುವಟಿಕೆಗಳು ಸಹಾಯ ಮಾಡುತ್ತವೆ.

# ಬೆಳಗಿನ ಪ್ರಾರ್ಥನಾ ಅವಧಿ ಚಟುವಟಿಕೆ



## ತೊಡಗಿಸಿಕೊಳ್ಳುವಿಕೆ

ವಿದ್ಯಾರ್ಥಿಗಳು ಪ್ರತಿ ತಿಂಗಳು ಬರುವ ವಿಷಯ ವಸ್ತುವಿನಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ಉದಾಹರಣೆ ಸಮುದಾಯದ ಪಾತ್ರಗಳನ್ನು ಅರ್ಥಮಾಡಿಕೊಳ್ಳಲು ವೈದ್ಯರು ಮತ್ತು ಪೊಲೀಸರು ಕುರಿತು ಚಟುವಟಿಕೆಗಳನ್ನು ಪ್ರಸರ್ಶನ ಮಾಡಿದ್ದಾರೆ.



## ಸಂತೋಷದಾಯಕ ಕಲಿಕೆ

ಶಿಕ್ಷಕ ಮತ್ತು ಶಾಲೆ, ಮೋಜಿನ ಗಣಿತ, ಹಣ್ಣುಗಳು ಮತ್ತು ತರಕಾರಿಗಳು, ದಿನಕ್ಕೊಂದು ಕಥೆ ಮತ್ತು ವಿಜ್ಞಾನ ಮ್ಯಾಜಿಕ್‌ನಂತಹ ವಿಷಯಾಧಾರಿತ ಅಸೆಂಬ್ಲಿಗಳು ಸಂತೋಷದಾಯಕ ಮತ್ತು ಅರ್ಥಪೂರ್ಣ ಕಲಿಕೆಯನ್ನು ಉತ್ತೇಜಿಸಿವೆ.



## ಉತ್ತೇಜನ

ಜಿಲ್ಲಾ ಪ್ರಗತಿ ಪರಿಶೀಲನಾ ಸಭೆಯಲ್ಲಿ ಐದು ಬ್ಲಾಕ್ ನ ನಾಯಕರು (BRP/BRC) ಬೆಳಗಿನ ಪ್ರಾರ್ಥನಾ ಅವಧಿ ಚಟುವಟಿಕೆ ಪ್ರಗತಿ ಮತ್ತು ದತ್ತಾಂಶವನ್ನು ಪ್ರಸ್ತುತಪಡಿಸಿದರು, ಮೇಲ್ವಿಚಾರಣೆ ಮತ್ತು ಕಾರ್ಯಕ್ರಮದ ಪ್ರಗತಿಯನ್ನು ಬಲಪಡಿಸಿಲು ಈ ದತ್ತಾಂಶಗಳು ಸಹಾಯ ಮಾಡಿದವು.



## ಸೃಜನಾತ್ಮಕತೆಗೆ ಅವಕಾಶ

ಜುಲೈ ತಿಂಗಳಿನ ಹೈಲೈಟ್ ಮಾಡಲಾದ ಸಾಂಸ್ಕೃತಿಕ ಚಟುವಟಿಕೆಗಳು - ಜಾನಪದ ನೃತ್ಯ ಮತ್ತು ಮಿಮಿಕ್ರಿ - ವಿದ್ಯಾರ್ಥಿಗಳಿಗೆ ಸೃಜನಶೀಲತೆಯನ್ನು ಪ್ರಸ್ತುತಪಡಿಸಲು ಅವಕಾಶ ನೀಡಿತು.



## ಶಾಲಾ ಭೇಟಿ

ಯಾದೃಚ್ಛಿಕ ಶಾಲಾ ಭೇಟಿಗಳು, CRP ಅವರ ಶಾಲಾ ಭೇಟಿ ಮತ್ತು ನಿಯಮಿತ WhatsApp ನವೀಕರಣಗಳ ಮೂಲಕ ಪರಿಣಾಮ ಮತ್ತು ತೊಡಗಿಸಿಕೊಳ್ಳುವಿಕೆಯನ್ನು ಗಮನಿಸಲಾಯಿತು

## ಫಲಿತಾಂಶಗಳು

- ಮಂತ್ರ ತಂಡದ ಶಾಲಾ ಭೇಟಿಗಳ ಆಧಾರದ ಮೇಲೆ ಒಟ್ಟು 6,78,827 ವಿದ್ಯಾರ್ಥಿಗಳು ಬೆಳಗಿನ ಪ್ರಾರ್ಥನಾ ಅವಧಿ (MA) ಚಟುವಟಿಕೆಗಳನ್ನು ಸಕ್ರಿಯವಾಗಿ ಮುನ್ನಡೆಸಿದರು.
- 39324 ಶಿಕ್ಷಕರು MA ಚಟುವಟಿಕೆಗಳನ್ನು ನಡೆಸುವಲ್ಲಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು ಮತ್ತು ಬೆಂಬಲ ನೀಡಿದರು.
- 86.74% ಶಾಲೆಗಳು ತಮ್ಮ ದೈನಂದಿನ ದಿನಚರಿಯ ಭಾಗವಾಗಿ ನಿಯಮಿತವಾಗಿ ಬೆಳಗಿನ ಅಸೆಂಬ್ಲಿಯನ್ನು ನಡೆಸುತ್ತಿದ್ದಾರೆ ಹಾಗೂ ಶಾಲಾ ಅಭಿವೃದ್ಧಿ ಉಪಕ್ರಮಗಳ ಸ್ಥಿರ ಅನುಷ್ಠಾನವನ್ನು ಪ್ರದರ್ಶಿಸಿದ್ದಾರೆ.

## ಪ್ರಮುಖ ಮುಖ್ಯಾಂಶಗಳು

- ವಿದ್ಯಾರ್ಥಿಗಳು ಮಾಸಿಕ ವಿಷಯಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರು, ಉದಾಹರಣೆಗೆ: ರಸ್ತೆ ಸುರಕ್ಷತೆ ಮತ್ತು ಸ್ಥಳೀಯ ಸರ್ಕಾರಿ ಸೇವೆಗಳ ಚಟುವಟಿಕೆಗಳು ಸಮುದಾಯದಲ್ಲಿ ಅವರ ಪಾತ್ರಗಳನ್ನು ಅರ್ಥಮಾಡಿಕೊಳ್ಳಲು ಅವರಿಗೆ ಸಹಾಯ ಮಾಡಿದವು.
- ಸಂಕ್ರಾತಿ ಮತ್ತು ಸುಗ್ಗಿ ಆಚರಣೆ, ವಿಜ್ಞಾನ ದಿನ, ಔಷಧೀಯ ಸಸ್ಯಗಳ ಪರಿಚಯ , ಹಣ್ಣುಗಳು ಮತ್ತು ತರಕಾರಿಗಳು , ಸಹಾಯ , ಸಹಕಾರ ಮತ್ತು ವಿಜ್ಞಾನ ಮ್ಯಾಗಿಯಂತಹ ವಿಷಯಾಧಾರಿತ ಅಸೆಂಬ್ಲಿಗಳು ಸಂತೋಷದಾಯಕ ಮತ್ತು ಅರ್ಥಪೂರ್ಣ ಕಲಿಕೆಯ ಅನುಭವಗಳನ್ನು ಉತ್ತೇಜಿಸಿದವು.
- ಜುಲೈನಲ್ಲಿ ಪ್ರಮುಖವಾಗಿ ಮಾಡಲಾದ ಜಾನಪದ ನೃತ್ಯ, ರಸಪ್ರಶ್ನೆ ಮತ್ತು ಮಿಮಿಕ್ರಿ ಸೇರಿದಂತೆ ಸಾಂಸ್ಕೃತಿಕ ಚಟುವಟಿಕೆಗಳನ್ನು ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಸೃಜನಾತ್ಮಕವಾಗಿ ಸಿದ್ಧಪಡಿಸಿ ಪ್ರದರ್ಶಿಸಿದರು.
- ಶಾಲಾ ಭೇಟಿಗಳು ಮತ್ತು ನಿಯಮಿತ ವಾಟ್ಸಾಪ್ ನವೀಕರಣಗಳ ಮೂಲಕ ಪರಿಣಾಮ ಮತ್ತು ತೊಡಗಿಸಿಕೊಳ್ಳುವಿಕೆಯನ್ನು ಟ್ರ್ಯಾಕ್ ಮಾಡಲಾಯಿತು.
- ಜಿಲ್ಲಾ ಹಂತದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಐದು ಬ್ಲಾಕ್ ನಾಯಕರು (BRP/BRC) ಬೆಳಗಿನ ಪ್ರಾರ್ಥನಾ ಸಭೆಯ ಪ್ರಗತಿ ಮತ್ತು ಡೇಟಾವನ್ನು ಪ್ರಸ್ತುತಪಡಿಸಿದರು, ಇದು ಕಾರ್ಯಕ್ರಮದ ಪರಿಣಾಮಕಾರಿ ಮೇಲ್ವಿಚಾರಣೆ ಮತ್ತು ಬಲವರ್ಧನೆಗೆ ಕೊಡುಗೆ ನೀಡಿತು.





# ಪೋಷಕರ ಸಬಲೀಕರಣ ಉಪಕ್ರಮ

*2025-26 ಸಾಲಿನ ಶೈಕ್ಷಣಿಕ ಮಾರ್ಗದರ್ಶಿಯಂತೆ 4 ಪೋಷಕರ ಸಭೆ ಹಾಗೂ 2 ಸಮುದಾಯದತ್ತ ಶಾಲೆ ಕಾರ್ಯಕ್ರಮಗಳನ್ನು ನಡೆಸಲು ಆದೇಶ ಹೋರಾಡಿಸಲಾಗಿದ್ದು ಹಾಗೂ ಶಿಕ್ಷಣ ಇಲಾಖೆಯ ಆದೇಶದಂತೆ ಈ ಬಾರಿ 4 ಪೋಷಕರ ಸಭೆ ಮತ್ತು 2 ಸಮುದಾಯದತ್ತ ಶಾಲೆಗಳನ್ನು ಹಮ್ಮಿಕೊಳ್ಳಲಾಗಿದೆ.*

ಪ್ರತಿ ಪೋಷಕರ ಸಭೆಗೂ ಪ್ರತ್ಯೇಕವಾದ ಆಜೆಂಡವನ್ನು ಮತ್ತು ಹಸ್ತಪ್ರತಿಯನ್ನು ರಾಜ್ಯದ ಎಲ್ಲಾ ಜಿಲ್ಲೆಯ ಡಯಟ್ ಗಳ ಮೂಲಕ ಶಾಲೆಗಳಿಗೆ ನೀಡಲಾಗಿದೆ, ಅದಕ್ಕನುಗುಣವಾಗಿ ಶಾಲೆಯಲ್ಲಿ ಪೋಷಕರ ಸಭೆಯನ್ನು ಯಶಸ್ವಿಯಾಗಿ ನಡೆಸಿದರು.

ಉದಾಹರಣೆ: ಮನೆಯಲ್ಲಿ ಕಲಿಕಾ ವಾತಾವರಣ ನಿರ್ಮಾಣ, ಪರೀಕ್ಷಾ ಸಿದ್ಧತೆ, ಮಕ್ಕಳ ಆರೋಗ್ಯದ ಕಾಳಜಿ ಮುಂತಾದವು.



ಮಗುವಿನ ಕಲಿಕೆಯು ಮನೆಯಿಂದಲೇ ಪ್ರಾರಂಭವಾಗುತ್ತದೆ, ಪೋಷಕರು ಮಕ್ಕಳ ಕಲಿಕೆಗೆ ಬೆಂಬಲ ವಾತಾವರಣವನ್ನು ಸೃಷ್ಟಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತಾರೆ. ಆದಾಗ್ಯೂ, ಅನೇಕ ಪೋಷಕರು ತಮ್ಮ ಮಗುವಿನ ಶಿಕ್ಷಣಕ್ಕಾಗಿ ಸಮಯ ಮತ್ತು ಸಂಪನ್ಮೂಲಗಳನ್ನು ನೀಡುವಲ್ಲಿ ಸವಾಲುಗಳನ್ನು ಎದುರಿಸುತ್ತಿದ್ದಾರೆ. ಪೋಷಕರ ಸಬಲೀಕರಣ ಉಪಕ್ರಮವು ಪೋಷಕರನ್ನು ತಮ್ಮ ಮಗುವಿನ ಕಲಿಕೆಯಲ್ಲಿ ತೊಡಗಿಸಿಕೊಳ್ಳುವ ಗುರಿಯನ್ನು ಹೊಂದಿದೆ.

## ಉದ್ದೇಶಗಳು

- ಪೋಷಕರು ಶಾಲಾ ಗುಂಪುಗಳಲ್ಲಿ ಮಕ್ಕಳ ಚಟುವಟಿಕೆಗಳನ್ನು ಹಂಚಿಕೊಳ್ಳುವ ಮೂಲಕ ಮನೆ-ಶಾಲಾ ಸಂಪರ್ಕವನ್ನು ಬಲಪಡಿಸುವ ಮತ್ತು ವಿದ್ಯಾರ್ಥಿಗಳ ಕಲಿಕೆಯನ್ನು ಬೆಂಬಲಿಸುವ ಮೂಲಕ ಸಕ್ರಿಯವಾಗಿ ತೊಡಗಿಸಿಕೊಳ್ಳುವರು.
- ಪೋಷಕರು ಮತ್ತು SDMC ಸದಸ್ಯರು ಮನೆಯಲ್ಲಿ ಓದುವ ಮೂಲೆಗಳನ್ನು ಸಿದ್ದಪಡಿಸುವುದು ಮತ್ತು ಮಕ್ಕಳ ಚಟುವಟಿಕೆ ನವೀಕರಣಗಳನ್ನು ಶಿಕ್ಷಕರೊಂದಿಗೆ ಸಕ್ರಿಯವಾಗಿ ಹಂಚಿಕೊಳ್ಳುವುದುರ ಮೂಲಕ ಮಕ್ಕಳಿಗೆ ಮನೆಯಲ್ಲಿ ಕಲಿಕಾ ವಾತಾವರಣವನ್ನು ಸೃಷ್ಟಿಸುವರು.
- ಶಿಕ್ಷಕರು ನಿಯಮಿತವಾಗಿ ಪೋಷಕರ ಗುಂಪುಗಳ ಮೂಲಕ ಪೋಷಕರೊಂದಿಗೆ ಕ್ಯಾಲೆಂಡರ್ ನಲ್ಲಿರುವ ಚಟುವಟಿಕೆಗಳು ಮತ್ತು ದಸರಾ ಚಟುವಟಿಕೆಗಳನ್ನು ಹಂಚಿಕೊಳ್ಳುವುದರ ಮೂಲಕ ಮಕ್ಕಳ ದೈನಂದಿನ ಕಲಿಕೆಯಲ್ಲಿ ಹೆಚ್ಚಿನ ಪೋಷಕರ ಒಳಗೊಳ್ಳುವಿಕೆಯನ್ನು ಖಚಿತಪಡಿಸಿಕೊಳ್ಳುವುದು.

## ಫಲಿತಾಂಶ

- DIETನಿಂದ ಶಾಲೆಗಳಿಗೆ PTM ಕಾರ್ಯಸೂಚಿ ಮತ್ತು ಸೂಚಿತ ಅಧಿವೇಶನ ಯೋಜನೆ ಮತ್ತು ಸಂಪನ್ಮೂಲಗಳೊಂದಿಗೆ ಸುತ್ತೋಲೆಯನ್ನು ಬಿಡುಗಡೆ ಮಾಡಿದೆ.
- ಜಿಲ್ಲೆಗಳ ಡ್ಯಾಶ್ಬೋರ್ಡ್ ನ ಮಾಹಿತಿ ಪ್ರಕಾರ ಶಾಲೆಗಳಲ್ಲಿ (CRP ವೀಕ್ಷಣೆಯ ಪ್ರಕಾರ) 4 PTM ಗಳನ್ನು ನಡೆಸಲಾಗಿದೆ. (ಜುಲೈ 26, 31 ಅಕ್ಟೋಬರ್, 30 ಜನವರಿ, 7 ಮಾರ್ಚ್ 2026)
- ರಾಜ್ಯದಲ್ಲಿ 15,97,032 ರಷ್ಟು ಪೋಷಕರು ಪೋಷಕರ ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ. ಅಂದರೆ ಶೇಕಡ 55% ಪೋಷಕರು ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ. (ತಂಡ ವೀಕ್ಷಣೆಯ ಪ್ರಕಾರ)
- 1117 PTM ವೀಕ್ಷಣೆಯನ್ನು ಕ್ಲಸ್ಟರ್, ಬ್ಲಾಕ್ ಮತ್ತು ಡಯಟ್ ಅಧಿಕಾರಿಗಳಿಂದ ಮಾಡಲಾಗಿದೆ.
- ರಾಜ್ಯದ ಎಲ್ಲಾ ಜಿಲ್ಲೆಯ ಸರ್ಕಾರಿ ಶಾಲೆಗಳಲ್ಲಿ ಒಂದೇ ದಿನ PTMಗಳನ್ನು ನಡೆಸಲಾಯಿತು.
- SDMC ಸದಸ್ಯರು ಮನೆಯಲ್ಲಿ ಕಲಿಕಾ ಸ್ಥಳವನ್ನು ರಚಿಸುವ ಬಗ್ಗೆ ಪೋಷಕರಿಗೆ ಮಾರ್ಗದರ್ಶನ ನೀಡಿದರು ಮತ್ತು ಇತರ ಪೋಷಕರನ್ನು ಪ್ರೇರೇಪಿಸಿದರು.
- ಪೋಷಕರನ್ನು ವಿಶೇಷವಾಗಿ ಸ್ವಾಗತಿಸಲಾಯಿತು ಮತ್ತು ಅವರ ಅನುಭವಗಳನ್ನು ಹಂಚಿಕೊಳ್ಳಲು ವೇದಿಕೆಯನ್ನು ನೀಡಲಾಯಿತು.
- ಪೋಷಕರ ಕ್ಯಾಲೆಂಡರ್‌ನ ಚಟುವಟಿಕೆಗಳನ್ನು ಪೋಷಕರಿಗೆ ವಿವರಿಸಲಾಗಿದೆ.
- 815 ಪೋಷಕರು ವಿದ್ಯಾರ್ಥಿಗಳಿಗೆ ಮನೆಯಲ್ಲಿಯೇ ಚಟುವಟಿಕೆಗಳನ್ನು ಮಾಡಿದ್ದಾರೆ.
- 1807 ಪೋಷಕರು ತಮ್ಮ ಮನೆಗಳಲ್ಲಿ ಕಲಿಕಾ ಪರಿಸರವನ್ನು ರಚಿಸಿದರು.

## ಮುಖ್ಯಾಂಶಗಳು

- ಶಿಕ್ಷಕರು ನಿಯಮಿತವಾಗಿ ಕ್ಯಾಲೆಂಡರ್‌ಗಳು ಮತ್ತು ರಜಾ ಚಟುವಟಿಕೆಗಳನ್ನು ಪೋಷಕರ ಗುಂಪುಗಳ ಮೂಲಕ ಪೋಷಕರೊಂದಿಗೆ ಹಂಚಿಕೊಂಡಿದ್ದಾರೆ ಇದು ಮಕ್ಕಳ ದೈನಂದಿನ ಕಲಿಕೆಯಲ್ಲಿ ಪೋಷಕರ ಪಾಲ್ಗೊಳ್ಳುವಿಕೆಗೆ ಕಾರಣವಾಗಿದೆ.
- ಪಾಲಕರು ಮತ್ತು SDMC ಸದಸ್ಯರು ಮನೆಯಲ್ಲಿ ಓದುವ ಮೂಲೆಗಳನ್ನು ರಚಿಸಿದ್ದಾರೆ ಮತ್ತು ಮಕ್ಕಳ ಕಲಿಕಾ ಚಟುವಟಿಕೆಗಳ ಕುರಿತು ಶಿಕ್ಷಕರೊಂದಿಗೆ ಸಕ್ರಿಯವಾಗಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳುತ್ತಿದ್ದಾರೆ ಹಾಗೂ ಇದು ಮನೆಗಳಲ್ಲಿ ಕಲಿಕಾ ವಾತಾವರಣವನ್ನು ನಿರ್ಮಿಸುವಲ್ಲಿ ಬೇರೆ ಪಾಲಕರಿಗೆ ಪ್ರೋತ್ಸಾಹವಾಗಿದೆ.
- ಪಾಲಕರು ಮತ್ತು SDMC ಸದಸ್ಯರು ಮಕ್ಕಳ ಚಟುವಟಿಕೆಗಳನ್ನು ಹಂಚಿಕೊಳ್ಳುವ ಮೂಲಕ, ಮನೆ ಮತ್ತು ಶಾಲೆಯ ನಡುವಿನ ಸಹಯೋಗವನ್ನು ಬಲಪಡಿಸಲು ಶಾಲಾ ಗುಂಪುಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ.




ಪ್ರಗತಿ ಹೆಜ್ಜೆ ಕಾರ್ಯಕ್ರಮವು ಉತ್ತಮ ಯೋಜನೆಗಳೊಂದಿಗೆ ವ್ಯವಸ್ಥಿತವಾಗಿ ಆಯೋಜಿಸಲಾಯಿತು. ಸಮಯದ ಪರಿಣಾಮಕಾರಿ ಬಳಕೆ ಗಮನಾರ್ಹವಾಗಿತ್ತು. ವಿಶೇಷವಾಗಿ ನ್ಯಾಯಾಂಗ ಇಲಾಖೆಯ ಸಹಭಾಗಿತ್ವದಿಂದ ಹೊಸ ವಿಷಯಗಳನ್ನು ತಿಳಿದುಕೊಳ್ಳಲು ಸಹಕಾರಿಯಾಯಿತು. ಮಕ್ಕಳಲ್ಲಿ ಕಾನೂನು ಅರಿವಿನ ಅಗತ್ಯತೆ ಎಷ್ಟು ಮುಖ್ಯವೆಂಬುದು ಇನ್ನಷ್ಟು ಸ್ಪಷ್ಟವಾಯಿತು.

**ಹೇಮಾವತಿ .ಡಿ ಉಪನ್ಯಾಸಕರು, ಡಯಟ್ - ಬೆಳಗಾವಿ**

ಮಂತ್ರ 4 ಚೇಂಜ್ ರವರ ಮಹೋನ್ನತವಾದ "ಸಚೇತನ" ಕಾರ್ಯಕ್ರಮದ ಸಾಧನೆಯ ಹಾದಿಯನ್ನು ತಿಳಿಯಲು ಪ್ರಗತಿ ಹೆಜ್ಜೆ 2025-26 ಎಂಬ ಅಭೂತ ಪೂರ್ವ ಕಾರ್ಯಕ್ರಮವಾಗಿತ್ತು. ನಿಜಕ್ಕೂ ಮಂತ್ರದವರ ಕಾರ್ಯದಕ್ಷತೆ, ವಿವಿಧ ರೀತಿಯ ಯೋಜನೆಗಳ ತಯಾರಿ, ಕಾರ್ಯಕ್ರಮದ ಅನುಷ್ಠಾನ ಹಾಗೂ ಮಂತ್ರ ಸದಸ್ಯರ ಅಚ್ಚುಕಟ್ಟಾದ ಕಾರ್ಯಕ್ರಮ ಅನುಷ್ಠಾನಗಳು ನಮ್ಮ ಮನಕ್ಕೆ ತುಂಬಾ ಮುದ ನೀಡಿದವು. ಅಲ್ಲದೇ ಎಲ್ಲಾ ಜಿಲ್ಲೆಯ ಅನುಷ್ಠಾನಾಧಿಕಾರಿಗಳಿಂದ ಮುಂಬರುವ ವರ್ಷಕ್ಕೆ ಆಗಬೇಕಾದ ಬದಲಾವಣೆಯ ಬಗ್ಗೆಯೂ ಅಭಿಪ್ರಾಯ ಪಡೆದದ್ದು ಅವರ ಹೃದಯ ವೈಶಾಲ್ಯಕ್ಕೆ ಹಿಡಿದ ಕೈಗನ್ನಡಿ ಎನಿಸಿತು.



**ಸುಬ್ರಮಣ್ಯ ಕೆ.ಪಿ, ಬಿ.ಆರ್.ಪಿ, ಚಿಕ್ಕಮಗಳೂರು ಜಿಲ್ಲೆ**



ನಾವೀನ್ಯಯುತ ಚಟುವಟಿಕೆಗಳಾದ ಬೆಳಗಿನ ಪ್ರಾರ್ಥನಾ ಅವಧಿಯ ಕಾರ್ಯಕ್ರಮಗಳು, ಓದುವ ಮೂಲೆ (Reading Corner) ಹಾಗೂ ಪಾಲಕ-ಪೋಷಕರ ಪರಿಣಾಮಕಾರಿ ಸಭೆಗಳಿಗಾಗಿ ವಿನೂತನ ಸಂಪನ್ಮೂಲಗಳನ್ನು ಒದಗಿಸಿ, ಅವುಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ನೀಡುತ್ತಿರುವ ಸಹಕಾರ ಶ್ಲಾಘನೀಯವಾಗಿದೆ. ಜೊತೆಗೆ, ಅನುಷ್ಠಾನಗೊಂಡ ಚಟುವಟಿಕೆಗಳನ್ನು ರಾಜ್ಯಮಟ್ಟದ ವೇದಿಕೆಯಲ್ಲಿ ಸ್ಟಾಲ್‌ಗಳ ಮೂಲಕ ಪ್ರಸ್ತುತಪಡಿಸಲು ಅವಕಾಶ ಕಲ್ಪಿಸಿರುವುದು ಆತ್ಮವಿಶ್ವಾಸವನ್ನು ಹೆಚ್ಚಿಸುವುದರ ಜೊತೆಗೆ ಉತ್ತಮ ಅಭ್ಯಾಸಗಳನ್ನು ಹಂಚಿಕೊಳ್ಳಲು ಸಹಕಾರಿಯಾಗಿದೆ.ಇದರೊಂದಿಗೆ, ಈ ಕಾರ್ಯಕ್ರಮವು ಶಾಲಾ ವಾತಾವರಣದಲ್ಲಿ ಸಕಾರಾತ್ಮಕ ಬದಲಾವಣೆಗಳನ್ನು ತರಲು, ವಿದ್ಯಾರ್ಥಿಗಳ ಕಲಿಕಾ ಮಟ್ಟವನ್ನು ಹೆಚ್ಚಿಸಲು ಹಾಗೂ ಶಿಕ್ಷಕರಲ್ಲಿ ಸೃಜನಾತ್ಮಕತೆ ಮತ್ತು ನಾಯಕತ್ವ ಗುಣಗಳನ್ನು ಬೆಳೆಸಲು ಮಹತ್ವದ ಪಾತ್ರ ವಹಿಸಿದೆ.

**ಚಂದ್ರಕಾಂತ ರೆಡ್ಡಿ, ಹಿರಿಯ ಉಪನ್ಯಾಸಕರು, ಡಯಟ್ ಯಾದಗಿರಿ**

# Our Gallery















# *Our Gallery*










Mantra

Inspire. Enable. Transform.

info@mantra4change.com

mantra4change.org

# 733, 17th Cross Road, KR Layout, JP Nagar, 6th Phase
Bengaluru, Karnataka - 560078

Mantra

Inspire. Enable. Transform.

